

ಶ್ರೀವಾಣಿ

ಭಾರತ ಮಾತೆಯ ಪುಣ್ಯ ಗರ್ಭದಲ್ಲಿ ಅನೇಕ ಮಹಾತ್ಮರು ಅವತಾರಗೈದಿದ್ದಾರೆ ಅವರು ವಿಶ್ವಮಾನ್ಯ ತತ್ವಗಳನ್ನು ಕಾಣಿಕೆ ರೂಪದಲ್ಲಿ ಜಗತ್ತಿಗೆ ನೀಡಿದ್ದಾರೆ. ಅಂತೆಯೇ ಎಂಟೊನೂರು ವರ್ಷಗಳ ಹಿಂದೆ ಪುಣ್ಯ ಶ್ಲೋಕರಾದ ಬಸವಣ್ಣನವರು 'ಕಾಯಕವೇ ಕೈಲಾಸ' ಎಂಬ ಸರ್ವಮಾನ್ಯವಾದ ಜೀವನ್ ತತ್ವವನ್ನು ಜಗತ್ತಿಗೆ ಮಾಡಿ ತೋರಿಸಿಕೊಟ್ಟಿದ್ದಾರೆ ಇಂದು ಜಗತ್ತಿನಲ್ಲಿ ಎಲ್ಲೆಡೆ ಕೇಳು ಬರುತ್ತಿರುವ ಸ್ವಾತಂತ್ರ ಸಮತೆ, ವಿಶ್ವ ಬಂಧುತ್ವದ ಘೋಷಣೆಗಳನ್ನು 8 ಶತಮಾನಗಳ ಹಿಂದೆಯೇ ಅನುಷ್ಠಾನಕ್ಕೆ ತಂದಿದ್ದಾರೆ. ಮತಾಚಾರಗಳ ಅಂಥ ಜಟಿಲತೆಯಲ್ಲಿ ಸಿಕ್ಕಿ ತೊಳಲಾಡುತ್ತಿದ್ದಾಗ ಮಾನವ ಕುಲಕ್ಕೆ ಭಕ್ತಿ ಮಾರ್ಗದ ಕೈದೀವಿಗೆಯನ್ನಿತ್ತು ಉದ್ಧಾರಗೈದಿದ್ದಾರೆ. ಭಾವಶುದ್ಧಿಯಿಂದ ಕೂಡಿದ ಭಕ್ತಿ ಯೋಗದಿಂದ ಮನುಷ್ಯ ತನ್ನೆಲ್ಲ ಬಂಧಗಳನ್ನು ಕಳಚಿ ನಿಲ್ಲಬಲ್ಲನೆಂಬುದನ್ನು ತೋರಿಸಿಕೊಟ್ಟಿದ್ದಾರೆ. ಜನ್ಮ; ವೃತ್ತಿಗಳ ಆಧಾರದ ಮೇಲೆ ಸಮಾಜ ನಿರ್ಮಿಸಿಕೊಂಡ ಮೇಲು-ಕೀಳುಗಳೆಂಬ ವೈಷಮ್ಯವನ್ನು ತೊಡೆದು ಹಾಕಿ ಸಮಾಜದಲ್ಲಿ ಸಮಾನತೆಯನ್ನು ರೂಢಿಗೊಳಿಸಿದ್ದಾರೆ. ಬಸವಣ್ಣನವರು ಸಮಾಜದಲ್ಲಿ ರಾಶಿರಾಶಿಯಾಗಿ ಬಿದ್ದಿದ್ದ ಕಸವನ್ನು ಸೊಂಟಕಟ್ಟಿ ಕೈಲಿ ಮಾರ್ಜನವಿಡಿದು ಗುಡಿಸಿ, ಜನ ಮನ ಹೃದಯವನ್ನು ಅಗೆದು ಭಕ್ತಿಯ ಬೀಜ ಬಿತ್ತಿದ್ದಾರೆ.

ಅವರು ಕಲ್ಯಾಣದ ಪ್ರಧಾನಮಂತ್ರಿಯಾಗಿ, ಶ್ರೇಷ್ಠ ಮಟ್ಟದ ಸಮಾಜ ಸುಧಾರಕರಾಗಿ, ನೂತನ ಸಾಹಿತ್ಯ ರಚನಾಕಾರರಾಗಿ, ಅನುಭವ ಮಂಟಪದ ಸಂಸ್ಥಾಪಕರಾಗಿ -ಹೀಗೆ ವಿವಿಧ ಮುಖ ಜೀವನದಿಂದ ಇಡೀ ಮಾನವ ಕುಲಕ್ಕೆ ಲೇಸನ್ನೇ ಬಯಸಿ ಜನಜಾಗೃತಿಯನ್ನುಂಟು ಮಾಡಿದ್ದಾರೆ.

ಒಟ್ಟಿನಲ್ಲಿ ಆರೋಗ್ಯಕರವಾದ ವಾತಾವರಣ ಎಲ್ಲೆಡೆ ಸೃಷ್ಟಿಯಾಗಬೇಕಾದರೆ ಅಣ್ಣನವರು ಬೋಧನೆಗೈದ ತತ್ವಗಳನ್ನು ಪೂರ್ಣ ಅನುಷ್ಠಾನಕ್ಕೆ ತರುವುದರಲ್ಲಿ ಸಮಾಜವು ಪ್ರವೃತ್ತವಾಗಬೇಕು.

‘ಸಿದ್ಧಗಂಗಾ’

ಮೇ, ೧೯೭೮

ಸಂಪುಟ–೧೪ ಸಂಚಿಕೆ- ೫

ಪ್ರಕಾಶಕರು

ಹೆಚ್. ಬಿ. ಗಂಗಾಧರಯ್ಯ,
ಹಳೆಯ ವಿದ್ಯಾರ್ಥಿಸಂಘದ ಪರವಾಗಿ

ಸಂಪಾದಕ ಮಂಡಲಿ

ಪಂ॥ ಚನ್ನಪ್ಪ ಎರೇಸೀಮೆ
ಪಿ. ಎನ್. ಚಂದ್ರಶೇಖರಯ್ಯ
ವಿರೂಪಾಕ್ಷಯ್ಯ
ಬಸವರಾಜು

ಜಾಹಿರಾತು ವ್ಯವಸ್ಥಾಪಕರು

ಎಂ. ರೇಣುಕಾರಾಧ್ಯ

ಮುದ್ರಕರು

ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ಮುದ್ರಣಾಲಯ

ಪ್ರಕಟನೆಯ ಸ್ಥಳ

ಶ್ರೀ ಸಿದ್ಧಗಂಗಾ ಕ್ಷೇತ್ರ

ಚಂದಾ ವಿವರ

ಆಜೀವ ಸದಸ್ಯತ್ವ: **151-00** ರೂ

ವಾರ್ಷಿಕ ಚಂದಾ: **10–00** ರೂ

ಈ ಸಂಚಿಕೆಯಲ್ಲಿ

ಮುಖಪುಟ

ಸಕಲ ಜೀವಾತ್ಮರಿಗೆ ಲೇಸನ್ನೆ ಬಯಸುವಂತೆ ಉಪದೇಶಿಸಿದ
ಭಕ್ತಿ ಭಂಡಾರಿ ಶ್ರೀ ಬಸವೇಶ್ವರರು.

ಲೇಖಕರಲ್ಲಿ ಮನವಿ

‘ಸಿದ್ಧಗಂಗಾ’ ಲೇಖಕರಿಂದ ಧಾರ್ಮಿಕ, ಸಾಂಸ್ಕೃತಿಕ ಐತಿಹಾಸಿಕ ಹಾಗೂ ವೈಚಾರಿಕ ಲೇಖನಗಳು, ಸಣ್ಣಕಥೆ, ಕವನ, ಪ್ರಬಂಧ ಇವುಗಳನ್ನು ಸದಾ ಸ್ವಾಗತಿಸುತ್ತದೆ. ಲೇಖನಗಳು ಫುಲ್‌ಸ್ಕೇಪ್ ಸೈಜಿನ 3 ಪುಟಗಳಿಗೆ ಮೀರದಂತಿದ್ದು ಕಾಗದದ ಒಂದೇ ಮಗ್ಗುಲಲ್ಲಿ ಬರೆಯಲ್ಪಟ್ಟಿರಬೇಕು. ಅಸ್ವೀಕೃತ ಲೇಖನಗಳನ್ನು ಹಿಂದಿರುಗಿಸಲಾಗುವುದಿಲ್ಲ. ಸ್ವೀಕೃತ ಲೇಖನಗಳಿಗೆ ‘ಸಿದ್ಧಗಂಗಾ’ ಆಗಿಂದಾಗ್ಗೆ ನಿಗದಿಪಡಿಸಿಕೊಳ್ಳುವ ಸಂಭಾವನೆಯನ್ನು ನೀಡಲಾಗುವುದು. ಲೇಖನಗಳನ್ನು

“ಸಂಪಾದಕರು”
“ಸಿದ್ಧಗಂಗಾ” [ಕನ್ನಡ ಮಾಸ ಪತ್ರಿಕೆ]
ಶ್ರೀ ಸಿದ್ಧಗಂಗಾ ಕ್ಷೇತ್ರ-572131 ತುಮಕೂರು ಜಿಲ್ಲೆ
ಇವರಿಗೆ ಕಳಿಸಿಕೊಡಬೇಕಾಗಿ ಪ್ರಾರ್ಥನೆ.

ಚಂದಾದಾರರಲ್ಲಿ ಮನವಿ

ಹೊಸ ವರ್ಷದ ನಿಮ್ಮ ಚಂದಾ ನಂಬರ್ ಗುರುತಿಸಿ ಕೊಳ್ಳಿ. ಚಂದಾ ಅವಧಿ ಮುಗಿಯುವವರೆಗೆ ವಿಳಾಸ ಬದಲಾ
ವಣೆ ಮತ್ತು ಇತರೆ ಬಗ್ಗೆ ವ್ಯವರಿಸುವಾಗ ನಿಮ್ಮ ವಿಳಾಸದ ಹಿಂಬದಿ ಇರುವ ಚಂದಾ ನಂಬರ್ ಅಥವಾ ಯಾರ ಮೂಲಕ ಸದ
ಸ್ಯತ್ವ ಪಡೆದಿರುವಿರೋ ಆ ನಮ್ಮ ಪ್ರತಿನಿಧಿಗಳ ಹೆಸರನ್ನು ಸೂಚಿಸಿ ವ್ಯವಹರಿಸಿ.

ಚಂದಾ ಬಾಕಿ ಇರುವವರು ಸಂದಾಯ ಮಾಡಿ ‘ಸಿದ್ಧಗಂಗಾ’ ಮುನ್ನಡೆಗೆ ಸಹಕರಿಸಿ.

ಚಂದಾ ಅವಧಿ ಮುಗಿದಿರುವ ಮಾನ್ಯ ಓದುಗರು ಮುಂದಿನ ಸಾಲಿಗೆ ಮುಂದುವರಿಸಿಕೊಳ್ಳಬೇಕಾಗಿ ಪ್ರಾರ್ಥನೆ.

ಪ್ರಕಾಶಕರು
‘ಸಿದ್ಧಗಂಗಾ’ ಮಾಸ ಪತ್ರಿಕೆ, ಸಿದ್ಧಗಂಗಾ ಮಠ–572131 **ತುಮಕೂರು ಜಿಲ್ಲೆ**

ನವನೀತ

ಹರಿಹರನ - ಬಸವಣ್ಣ

ಬಸವನ ಮಾತೆ ಮಾತು ಬಸವಣ್ಣನ ಭಕ್ತಿಯ ಓಜೆಯೋಜೆ ಕೇಳ್
ಬಸವನ ರೀತಿ ರೀತಿ ಬಸವಣ್ಣನ ಕಿಂಕರ ವೃತ್ತಿ ವೃತ್ತಿ ನೋಡ್.

ಬಸವನ ಬಟ್ಟೆ ಬಟ್ಟೆ ಬಸವಣ್ಣನ ಬಿಂಕದ ಭಾಷೆ ಭಾಷೆ ಹೋ
ಬಸವನ ನಿಷ್ಠೆ ನಿಷ್ಠೆ ಬಸವಣ್ಣನ ನೇಮವೆ ನೇಮವುರ್ವಿಯೊಳ್.

ಬಸವನ ಗೀತಿ ಗೀತಿ ಬಸವಣ್ಣನ ನಿರ್ಮಲ ರೂಪು ರೂಪು ಕೇಳ್
ಬಸವನ ಗಾಡಿ ಗಾಡಿ ಬಸವಣ್ಣನ ಕೀರ್ತಿ ಕೀರ್ತಿ ನೋಡ್.

ಬಸವನ ಬುದ್ಧಿ ಬುದ್ಧಿ ಬಸವಣ್ಣನ ಪುಣ್ಯದ ಲೀಲೆ ಲೀಲೆ ಹೋ
ಬಸವನ ರಕ್ಷೆ ರಕ್ಷೆ ಬಸವಣ್ಣನ ಶಿಕ್ಷೆಯೆ ಶಿಕ್ಷೆ ಲೋಕದೊಳ್.

ಬಸವನ ಪೆರ್ಮೆ ಪೆರ್ಮೆ ಬಸವಣ್ಣನ ನೆಚ್ಚಿನ ಕೂರ್ಮೆ ಕೂರ್ಮೆ ಕೇಳ್
ಬಸವನ ಸೀಮೆ ಸೀಮೆ ಬಸವಣ್ಣನ ಶೀತಲ ಶಾಂತಿ ಶಾಂತಿ ನೋಡ್.

ಬಸವನ ಜಾಣುಜಾಣು ಬಸವದೇವನ ಭಾವದ ಕಾಣ್ಕೆಕಾಣ್ಕೆ ಹೋ
ಬಸವನ ಭಕ್ತಿಭಕ್ತಿ ಬಸವಣ್ಣನ ಯುಕ್ತಿಯೇಯುಕ್ತಿ ಲೋಕದೋಳ್

ಅಮೃತ ಬಿಂದು

“ಉದಾರ ಚರಿತಾನಾಂತು ವಸುಧೈವ ಕುಟುಂಬಕಂ”- ಉದಾರ ಮನಸ್ಸುಳ್ಳವರಿಗೆ ಈ ಭೂಮಂಡಲವೇ ತನ್ನ ಮನೆಯಾಗಿರುವುದು ಎಂಬುದು ಸಜ್ಜನರ ಹೇಳಿಕೆ. ಸತ್ಪುರುಷರ ನಡೆನುಡಿ ಬದುಕೆಲ್ಲವೂ ಲೋಕ ವ್ಯತಿರಿಕ್ತವಾಗಿ ಕಾಣುತ್ತದೆ. ಆದರೂ ಅದು ನಿತ್ಯಸತ್ಯವಾಗಿರುತ್ತದೆ ಅವರ ಬಾಳಿನಲ್ಲಿ. ಆ ಸಜ್ಜನರು ದೇಶ ಸೇವೆಗೆ, ಲೋಕಸೇವೆಗೆ ತಮ್ಮನ್ನು ತಾವೇ ಮುಡುಪುಗೈಯುತ್ತಾರೆ. ಇಡೀ ಮಾನವ ಕುಲಕೋಟಿಯ ಕಲ್ಯಾಣಕ್ಕೆ ತಮ್ಮನ್ನು ಬಲಿಕೊಡಲೂ ಸಿದ್ಧರಿರುತ್ತಾರೆ. ಅವರ ಕಲ್ಯಾಣಕಾರಕ ಭಾವನೆ ಆಲೋಚನೆಗಳಾವುವು ಅಡ್ಡ ಬರಲಾರವು. ಬಂದರೂ ಅವುಗಳನ್ನು ಗಣನೆಗೆ ತೆಗೆದುಕೊಳ್ಳಲಾರರು. ಅವರ ನಿರ್ದಿಷ್ಟ ಗುರಿಯ ಸಾಧನೆಯೆ ಅವರ ಪರಮ ಗುರಿ. ಮೇಲು ಕೀಳು, ಉಚ್ಚ-ನೀಚ ಭಾವನೆಗಳು, ಪ್ರಾಂತ ದೇಶ ಭಾವನೆಗಳಾವುವು ಅವರನ್ನು ಸ್ಥಿರ ಸಂಕಲ್ಪಕ್ಕೆ ಅಡಚಣೆಯನ್ನುಂಟು ಮಾಡಲಾರವು. ಮತ-ಮೌಢ್ಯಗಳು- ಅಧಿಕಾರಐಶ್ವರ್ಯಗಳಾವುವು ಅವರನ್ನು ಕಂಗೆಡಿಸಲಾರವು. ಎಲ್ಲ ವಿಧವಾದ ಸಂಸಾರ ಸಮಸ್ಯೆಗಳಿದ್ದರೂ ಅವುಗಳಿಂದ ಬದ್ಧರಾದಹೊ ಬದ್ಧರಾಗದೆ, ಇದ್ದೂ ಬದ್ಧರಲ್ಲ. ಸುಳಿದೂ ಸೂತಕಿಯಲ್ಲ ಎಂಬಂತೆ ಜಿಹ್ವೆಗಂಟಿದ ತುಪ್ಪದಂತೆ ಅಂಟಿಯೂ ಅಂಟದಂತೆ ಅವುಗಳ ಹೊಡೆತಬಡಿತದಿಂದ ಪೆರಗನ್ನು ಪಡೆದು ಪುಟವಿಟ್ಟ ಬಂಗಾರವಾಗಿ ಹೊಸ ಕಾಂತಿಯಿಂದ ಧೃತಿಗೆಡದೆ ಲೋಕ ರಂಗಕ್ಕೆ ಧುಮುಕುತ್ತಾರೆ. ತಮ್ಮ ಅರಿವಿನ ಜ್ಯೋತಿಯನ್ನು ಬೆಳಗಿಸಿಕೊಂಡು ಜ್ಯೋತಿ ಮುಟ್ಟಿದ ಬತ್ತಿ ಜ್ಯೋತಿಯಪ್ಪಂತೆ’ ತಮ್ಮ ನಡೆ ನುಡಿ ಮೊದಲಾದ ಈ ಬಗೆಯ ಪಂಚಪರುಷ ಪ್ರಭಾವದಿಂದ ಇತರರನ್ನು ಬೆಳಗಿಸುತ್ತಾರೆ.

—‘ದುಂಬಿ’

ಹದಿನೆಂಟನೆಯ ಶತಮಾನದ ವೀರಶೈವ ಸಾಹಿತ್ಯ

ಓ. ಎನ್. ಲಿಂಗಣ್ಣಯ್ಯ

ವಿಶಾಲ ಭಾರತದಲ್ಲಿ ವೈದಿಕ, ಜೈನ, ಬೌದ್ಧ, ವಾಙ್ಮಯಗಳಿರುವಂತೆಯೇ ವೀರಶೈವ ವಾಙ್ಮಯವೂ ಅತ್ಯಂತ್ಯ ಪ್ರಾಚೀನ ಕಾಲದಿಂದಲೂ ಬೆಳೆದುಕೊಂಡು ಬಂದಿದೆ. ವೀರಶೈವ ಸಾಹಿತ್ಯ ಅನಂತ ಮತ್ತು ಅನಾದಿ ಎಂಬುದರಲ್ಲಿ ಸಂಶಯವಿಲ್ಲ. ಈ ಸಾಹಿತ್ಯ ಸಂಸ್ಕೃತ, ಆಂಧ್ರ, ತಮಿಳು, ಕಾಶ್ಮೀರಿ ಮತ್ತು ಮಹಾರಾಷ್ಟ್ರ ಭಾಷೆಗಳಲ್ಲಿಯೂ ಅಪರಿಮಿತವಾಗಿದೆಯೆಂದು ತಿಳಿದುಬರುತ್ತದೆ. ಕರ್ನಾಟಕ ಕವಿ ಪಟ್ಟಾವಳಿಯನ್ನು ಹಿಡಿದು ನೋಡಿದರೆ ಉಜ್ವಲ ಪ್ರತಿಭಾಶಾಲಿಗಳಾದ ವೀರಶೈವ ಕವಿಪುಂಗವರು ಅನೇಕ ಶತಮಾನಗಳಿಂದಲೂ ಕನ್ನಡ ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಗ್ರಂಥದ ರಚನೆ ಮಾಡಿರುವುದು ಕಂಡು ಬರುತ್ತದೆ. ಅದರಂತೆಯೇ ಹದಿನೆಂಟನೆಯ ಶತಮಾನದ ಸಾಹಿತ್ಯವನ್ನು ವಿಹಂಗಮ ದೃಷ್ಟಿಯಿಂದ ಅವಲೋಕಿಸಿದರೆ, ಕನ್ನಡನಾಡಿನಲ್ಲಿ ವೀರಶೈವ ಕವಿಗಣ ಸಾಹಿತ್ಯ ದೇವಿಯನ್ನು ತುಂಬ ನಿಷ್ಠೆಯಿಂದ ಆರಾಧಿಸಿರುತ್ತಾರೆಂಬುನ್ನು ನಾವು ಮನಗಾಣಬಹುದು. ಈ ಕವಿಗಳಲ್ಲಿ ಆಚಾರ್ಯರುಂಟು, ವಿರಕ್ತರುಂಟು, ಗೃಹಸ್ಥ ರಾಜಕಾರಣಿಗಳುಂಟು, ಸ್ತ್ರೀಯರುಂಟು, ಅಷ್ಟೇಕೆ; ನಿರಕ್ಷರ ಕುಕ್ಷಿಗಳೆನಿಸಿದ ಭಾವುಕರುಂಟು! ಪ್ರಪಂಚದ ಯಾವ ನಾಡಿನಲ್ಲಿಯೇ ಆಗಲಿ ಆ ನಾಡಿನ ಸಾಹಿತ್ಯದ ಬೆಳವಣಿಗೆಯ ಮೇಲೆ ಆ ನಾಡಿನ ರಾಜಕೀಯ ಪ್ರಭಾವ ಬಿದ್ದಿರುತ್ತದೆಯೆಂಬುದನ್ನು ಮರೆಯುವಂತಿಲ್ಲ. ಈ ಪರಿಸ್ಥಿತಿ ಕನ್ನಡ ನಾಡಿನಲ್ಲಿ ಹದಿನೆಂಟನೆಯ ಶತಮಾನದ ಸಾಹಿತ್ಯದ ಮೇಲೆಯೂ ಸ್ಪಷ್ಟವಾಗಿ ಗೋಚರಿಸುತ್ತದೆ. ಈ ಶತಮಾನದಲ್ಲಿ ಕನ್ನಡನಾಡು ಅನೇಕ ರಾಜಮನೆತನಗಳ ಆಳ್ವಿಕೆಯಲ್ಲಿತ್ತು. ವಿಜಯನಗರ ಸಾಮ್ರಾಜ್ಯ ಹಾಳಾದ ಮೇಲೆ ಅನೇಕ ಸಣ್ಣಪುಟ್ಟ ರಾಜರೂ, ಪಾಳೆಯಗಾರರೂ, ಸುಲ್ತಾನರೂ ಪ್ರಬಲರಾದರು. ಅವರೂ ಪರಸ್ಪರ ಕಾದಾಡಿ, ರಾಜ್ಯದಾಹದಿಂದ ಬಳಲುತ್ತಿದ್ದರು. ಆಗ ಕರ್ನಾಟಕದಲ್ಲಿ ಮೈಸೂರು ಕೆಳದಿ, ಬಿಳಿಗಿ, ರಾಜರೂ, ಚಿತ್ರದುರ್ಗ, ಹರಪ್ಪನಹಳ್ಳಿ, ಕಿತ್ತೂರು, ಹೊಸಕೋಟೆ, ಬಿಜ್ಜವರ, ಸುಗಟೂರು ಪ್ರಾಂತಗಳ ಪಾಳೆಯಗಾರರೂ ಹಿಂದೂ ಧರ್ಮ, ಸಂಸ್ಕೃತಿ, ಸಾಹಿತ್ಯಗಳನ್ನು ಪರಿಪೋಷಿಸುತ್ತಿದ್ದರು. ಇವರು ಅನೇಕ ಕವಿಗಳಿಗೆ ಆಶ್ರಯದಾತರಾಗಿದ್ದರು. ರಾಜಕೀಯ ಪ್ರಕ್ಷುಬ್ಧ ವಾತಾವರಣದಲ್ಲಿಯೂ ಮೈಸೂರು ಒಡೆಯರೂ, ಕೆಳದಿಯ ರಾಜರೂ ಸಾಹಿತ್ಯ ಪೋಷಕರಾಗಿದ್ದರು. ಆ ಕಾಲದಲ್ಲಿ ಅನೇಕ ವೀರಶೈವ ಮಠಗಳು ಸಾಹಿತ್ಯಕ್ಕೆ ಆಶ್ರಯಸ್ಥಾನಗಳಾಗಿದ್ದವು. ಅನೇಕ ವೀರಶೈವ ವಿರಕ್ತ ಶಿವಯೋಗಿಗಳೂ, ಶರಣ ಕವಿಗಳೂ ನಾಡಿನಲ್ಲಿ ಸಂಚರಿಸಿ ಧರ್ಮ ಪ್ರಸಾರ ಮಾಡಿದರು.

ಹದಿನೆಂಟನೆಯ ಶತಮಾನದಲ್ಲಿ ರಚಿತವಾದ ಸಾಹಿತ್ಯದಲ್ಲಿ ಹಾಡುಗಬ್ಬಗಳೇ ಹೆಚ್ಚಾಗಿ ಕಂಡು ಬರುತ್ತವೆ ಈ ಹಾಡುಗಬ್ಬಗಳನ್ನು ವೀರಶೈವ ಜಂಗಮ ಶ್ರೇಣಿ ಏಕನಾದವನ್ನು ಮೀಟುತ್ತ ಹಳ್ಳಿಹಳ್ಳಿಗಳಲ್ಲಿಯೂ ಹಾಡಿಕೊಂಡು ಧರ್ಮ ಜಾಗೃತಿಯನ್ನುಂಟು ಮಾಡುತ್ತಿದ್ದರು. ಕನ್ನಡದಲ್ಲಿ ಪ್ರೌಢ ಕಾವ್ಯಗಳ ಕಾಲ ಮುಗಿದು ಹೋಗಿತ್ತು. ಸಂಸ್ಕೃತ ಭಾಷಾ ಛಂದಸ್ಸು ಹಿಂದೆ ಬಿದ್ದಿತ್ತು. ಷಟ್ಪದಿ, ರಗಳೆ, ಸಾಂಗತ್ಯ, ತ್ರಿಪದಿ. ಚತುಷ್ಪದಿ, ಯಕ್ಷಗಾನ ಮೊದಲಾದ ದೇಸಿ ಛಂದಸ್ಸಿನಲ್ಲಿ ಸಾಹಿತ್ಯ ಸೃಷ್ಟಿಯಾಗುತ್ತಿತ್ತು. ಸಾಹಿತ್ಯದ ಈ ಸ್ವರೂಪವನ್ನು ನಾವು ಹದಿನೆಂಟನೆಯ ಶತಮಾನದಲ್ಲಿ ಅರಿಯ ಬಹುದು ಈ ಶತಮಾನದಲ್ಲಿ ಆಗಿ ಹೋದ ಒಂದುನೂರ ಇಪ್ಪತ್ತಾರು ಕವಿಗಳಲ್ಲಿ ಮೂವತ್ತೊಂಬ್ಬತ್ತು ವೀರಶೈವ ಕವಿಗಳಿದ್ದಾರೆಂಬುನ್ನು ಕವಿ ಚರಿತ್ರೆಯಿಂದ ತಿಳಿಯಬಹುದು ಕವಿ ಚರಿತ್ರೆಕಾರರ ಗಮನಕ್ಕೆ ಬಾರದ ಇನ್ನೂ ಕೆಲವರು ಕವಿಗಳಿರಬಹುದು; ಇನ್ನೂ ಕೆಲವು ಕವಿಗಳ ಕಾಲ ಯಾವುದೆಂಬ ವಿಚಾರದಲ್ಲಿ ಭಿನ್ನಾಭಿಪ್ರಾಯಗಳೂ ಇರಬಹುದು. ಈ ಅಂಶಗಳೆಲ್ಲ ನಿರ್ಧಾರವಾಗಿ ನಿರ್ಣಯವಾಗುವರೆಗೆ ಕವಿ ಚರಿತ್ರೆಯನ್ನು ಆಧಾರವಾಗಿಟ್ಟು ಕೊಂಡು ಶತಮಾನದ ಸಾಹಿತ್ಯವನ್ನು ಸಮೀಕ್ಷಿಸುವುದೇ ಸಮಂಜಸವಾಗಿರುತ್ತದೆ. ಈ ಆಧಾರವನ್ನು ಅನುಲಕ್ಷಿಸಿ, ಈ ಶತಮಾನದಲ್ಲಿ ಸಾಕಾದಷ್ಟು ವೀರಶೈವ ಕವಿಗಳು ಕಾವ್ಯ ರಚನೆ ಮಾಡಿಲ್ಲವೆಂದು ಹೇಳಬಹುದು. ಬಹುಶಃ ವೀರಶೈವರಿಗೆ ಸಾಕಾದಷ್ಟು ರಾಜಾಶ್ರಯ ಲಭಿಸಲಿಲ್ಲವೆಂದೂ, ಅಂದಿನ ರಾಜಕೀಯ ಪರಿಸ್ಥಿತಿಯೂ ಬಹಳ ಮಟ್ಟಿಗೆ ವೀರಶೈವ ಕವಿಗಳಿಗೆ ಪ್ರೋತ್ಸಾಹದಾಯಕವಾಗಿರಲಿಲ್ಲವೆಂದೂ ವ್ಯಕ್ತವಾಗುತ್ತದೆ.

ವಿಜಯನಗರ ರಾಜ್ಯ ಸ್ಥಾಪನೆಯಾದ ಮೇಲೆ ವೀರಶೈವದ ಪುನರುಜ್ಜೀವನ ಕೇಂದ್ರಗಳೆಂದರೆ, ಕರ್ನಾಟಕದಲ್ಲಿ ಹಂಪೆ ಮತ್ತು ಎಡೆಯೂರು ಎಂದು ವೀರಶೈವ ವಾಙ್ಮಯದಿಂದ ನಿರ್ಧರಿಸಬಹುದು. ಹಂಪೆಯಲ್ಲಿ ರಾಜಾಶ್ರಯವಿದ್ದರೆ ಎಡೆಯೂರಿನಲ್ಲಿ ತೋಂಟದ ಸಿದ್ಧಲಿಂಗೇಶ್ವರಯತಿಯ ಕೃಪಾಶ್ರಯವಿತ್ತು. ಈ ಎರಡು ಕೇಂದ್ರಗಳೂ ವೀರಶೈವದ ಮೇಲೆ ದೃಢ ಪ್ರಭಾವವನ್ನು ಬೀರಿದುವು. ಕರ್ನಾಟಕದಲ್ಲೆಲ್ಲಾ ಅನೇಕ ವೀರಶೈವ ಮಠಗಳು ಸ್ಥಾಪನೆಯಾದವು. ಜನಸಾಮಾನ್ಯರ ಸಂಪರ್ಕದಿಂದ ಬೆಂಬಲವನ್ನು ಪಡೆದು ಈ ಮತ ತನ್ನ ಶಕ್ತಿಯನ್ನು ಗಳಿಸಿಕೊಳ್ಳುತ್ತ ಬಂತು. ಎಡೆಯೂರು ಪವಿತ್ರ ಕ್ಷೇತ್ರವಾದಂತೆ ವೀರಶೈವ ಪುನರುಜ್ಜೀವನದ ಶ್ರೀ ಗುರುಧಾಮಿಯೂ ಆಯಿತು. ಶ್ರೀಸಿದ್ಧಲಿಂಗಯತಿವರ್ಯರು [1480] ಲಿಂಗೈಕ್ಯರಾದ ಮೇಲೆ, ಹದಿನೆಂಟನೆಯ ಶತಮಾನದವರೆಗೆ ಸುಮಾರು ಇನ್ನೂರು ವರ್ಷಗಳವರಗೆ ನಾಡಿನಲ್ಲಿ ನಡೆದ ರಾಜಕೀಯ ಆಂದೋಲನವನ್ನು ಅಲೋಕಿಸಿದರೆ, ಈ ಶತಮಾನದ ವೀರಶೈವ ಸಾಹಿತ್ಯದ ರೂಪರೇಷಗಳನ್ನು ಗುರುತಿಸಬಹುದು ದೇಶಿಯ ಹಿನ್ನೆಲೆಯಲ್ಲಿ ಹದಿನಾರು ಮತ್ತು ಹದಿನೇಳನೆಯ ಶತಮಾನಗಳ ರಾಜಕೀಯ, ಧಾರ್ಮಿಕ ಮತ್ತು ಸಾಮಾಜಿಕ ಶಕ್ತಿತ್ರಯವೇ ಪ್ರಭಾವಳಿಯಾಗಿ ಮೆರೆಯುತ್ತಿದೆಯೆಂಬುದನ್ನು ಇತಿಹಾಸ ಸಾರುತ್ತಿದೆ. ಈ ಶತಮಾನದಲ್ಲಿ ಹುಟ್ಟಿದ ಒಟ್ಟು 250 ಗ್ರಂಥಗಳಲ್ಲಿ 48 ಗ್ರಂಥಗಳನ್ನು ವೀರಶೈವಕವಿಗಳು ರಚಿಸಿದ್ದಾರೆ. ಈ ಶತಮಾನದ ಗ್ರಂಥ ಶ್ರೇಣಿಯಲ್ಲಿ ಸಾಹಿತ್ಯ ರೂಪದಲ್ಲಿ 40. ಕೀರ್ತನೆಗಳ ರೂಪದಲ್ಲಿ 28 ಯಕ್ಷಗಾನ ಧಾಟಿಯಲ್ಲಿ 17 ಮತ್ತು ಗದ್ಯದಲ್ಲಿ 16 ಗ್ರಂಥಗಳು ಕಂಡು ಬರುತ್ತವೆ. ಇವುಗಳಲ್ಲಿ ವೀರಶೈವ ಕವಿಗಳು 4 ಸಾಂಗತ್ಯ ಗ್ರಂಥಗಳನ್ನೂ 13 ಷಟ್ಪದಿ ಕಾವ್ಯಗಳನ್ನೂ 4 ಯಕ್ಷಗಾನ ಕೃತಿಗಳನ್ನೂ 4 ಕೀರ್ತನೆಗಳನ್ನೂ 2 ಗದ್ಯಗ್ರಂಥಗಳನ್ನೂ ಬರೆದಿರುತ್ತಾರೆ. ಈ ಕಾಲದಲ್ಲಿ ಒಂದು ಚಂಪೂ ಗ್ರಂಥ ರಚನೆಯೂ ಕಂಡು ಬರುತ್ತದೆ. ಕಾಲಜ್ಞಾನ ಕೃತಿಗಳೂ ಆಗಿವೆ. ಶತಕಗಳೂ ಬಂದಿವೆ; ಇಮ್ಮಡಿ ಮುರಿಗೆಯಸ್ವಾಮಿ ಹಾಲಾಸ್ಯ ಪುರಾಣ ಎಂಬ ಚಂಪೂ ಕಾವ್ಯವನ್ನು ಬರೆದಿದ್ದಾನೆ. ಈ ಕಾಲದ ವೀರಶೈವ ಕವಿಗಳು ತಮ್ಮಕಾವ್ಯಗಳ ಕಥಾ ವಸ್ತುವನ್ನು ಬಹಳ ಮಟ್ಟಿಗೆ ಮಿರಶೈವವಾಙ್ಮಯದಿಂದಲೇ ಆರಿಸಿಕೊಂಡಿರುತ್ತಾರೆ. ಅಷ್ಟಾದಶ ಪುರಾಣಗಳು, ಶಿವನ ಪಂಚವಿಂಶತಿ ಲೀಲೆಗಳು, ಶಿವಶರಣರ ಮತ್ತು ವಿರಕ್ತರ ಜೀವನ ವೃತ್ತಾಂತಗಳು ಅರುವತ್ತುಮೂವರು ಪುರಾತನರ ಮತ್ತು ನೂತನ ಕತೆಗಳು ಅಲ್ಲದೆ ವೀರಶೈವ ಸಿದ್ಧಾಂತ ಮತ್ತು ತತ್ತ್ವಗಳಿಗೆ ಸಂಬಂಧ ಪಟ್ಟ ವಿಚಾರಗಳು ಇವು ಈ ಶತಮಾನದ ವೀರಶೈವ ಸಾಹಿತ್ಯದ ಆಕರಗಳಾಗಿವೆ. ಕಥಾವಸ್ತುವಿನಲ್ಲಿ ಇವರು ಅಂಥ ನೂತನ ವಿಚಾರಗಳನ್ನೇನೂ ಅಳವಡಿಸಿಕೊಂಡಂತೆ ಕಂಡು ಬರುವುದಿಲ್ಲ. ಕಾವ್ಯರೀತಿಯಲ್ಲಿ ಹೊಸದಾರಿಯನ್ನೇನೂ ತುಳಿದಂತೆ ಕಾಣುವುದಿಲ್ಲ. ಕಾವ್ಯಪ್ರತಿಭೆಯಾಗಲಿ, ಕಲ್ಪನಾ ವಿಲಾಸವಾಗಲಿ ಈ ಕಾಲದ ಕೃತಿಗಳಲ್ಲಿ ಗೋಚರಿಸುತ್ತಿಲ್ಲ. ಆದರೂ ಈ ಸಾಹಿತ್ಯದಲ್ಲಿ ಶೈವೋತ್ಕರ್ಷತೆ, ಶಿವಭಕ್ತಿ ಶಿವಾಚಾರ, ಶಿವಸಿದ್ಧಾಂತಸ್ವರೂಪಗಳಂತೂ ತುಂಬಿ ತುಳುಕುತ್ತವೆ. ಶರಣ ಕವಿಗಳು ಬಹಳ ಸರಳ ಸುಂದರ ಶೈಲಿಯಲ್ಲಿ ಹಾಡುಗಬ್ಬಗಳನ್ನು ರಚಿಸಿ ಸಮಾಜವನ್ನು ನೀತಿಮಾರ್ಗದಲ್ಲಿ ನಡೆಸಿರುತ್ತಾರೆ. ಭಕ್ತಿ, ಜ್ಞಾನ

(26 ನೇ ಪುಟ ನೋಡಿ)

ಕನ್ನಡದ ಪಾಣಿನಿ ಕೇಶಿರಾಜ

—ಹಂಪ ನಾಗರಾಜಯ್ಯ

ಇದರಲ್ಲಿ ಅರೆ ಹುರುಳಿದಿಯೇ ಹೊರತು ಪೂರ್ತಿ ಸತ್ಯವಿಲ್ಲ. ಎಂಬುದನ್ನು ನೆನಪಿಡಬೇಕು. ಕೇಶಿರಾಜನ ವ್ಯಾಕರಣಕ್ಕೆ ೧೬ನೇ ಶತಮಾನದ ಲಿಂಗಣಾರಾಧ್ಯ ಬರೆದ ವ್ಯಾಖ್ಯಾನ, ೧೮ ನೇ ಶತಮಾನದ ನಿಟ್ಟೂರು ನಂಜಯ್ಯ ಬರೆದ ವ್ಯಾಖ್ಯಾನ ಕೇಶಿರಾಜನ ಪರಂಪರೆಗೆ ಸೇರುತ್ತವೆ. ಅವರಿಬ್ಬರೂ ಶಬ್ದಮಣಿದರ್ಪಣದ ಪರಿಣತ ಅಭ್ಯಾಸಿಗಳು. ಲಿಂಗಣಾರಾಧ್ಯನ ಸೂತ್ರಾನ್ವಯ ರತ್ನಮಾಲೆಯ ಉಪಯುಕ್ತತೆಯನ್ನು ಮರೆಯುವಂತಿಲ್ಲ. ಶಬ್ದಮಣಿದರ್ಪಣಕ್ಕೆ ಅವನಿಗಿಂತ ಮೊದಲೇ ಇನ್ನೊಬ್ಬ ವ್ಯಾಖ್ಯಾನಕಾರನಿದ್ದನೆಂದು ಸೂತ್ರ ೯೯ಕ್ಕೆ ಬರೆದ "ಸರೂಪಮಿದಿರಾಗೆ ದೋಷಂ ಎಂದುಕಂ.....ಸಪ್ಪತಾಂ ಮಾಡಿದ ಶಬ್ದಮಣಿದರ್ಪಣ ವ್ಯಾಖ್ಯಾನದೊಳ್ ಬರೆದಂ ಅದುಪೊಲ್ಲ" ಎಂಬ ವಿವರಣ ವೃತ್ತಿಯಿಂದ ಖಚಿತವಾಗಿ ತಿಳಿಯಲು ಸಾಧ್ಯವಿದೆ. ಸೂತ್ರಕಾರನಾದ ಕೇಶಿರಾಜನ ವೃತ್ತಿಗೆ ಬದಲು ತಾನೇ ಬೇರೆ ವೃತ್ತಿಯನ್ನು ಬರೆದ ಲಿಂಗಣಾರಾಧ್ಯನ ಎದೆಗಾರಿಕೆ ಮೆಚ್ಚುವಂತಹುದು; ಶಬ್ದಮಣಿ ದರ್ಪಣದ ಮದರಾಸು ಮುದ್ರಣದಲ್ಲಿ ಕೇಶಿರಾಜನ ವೃತ್ತಿ ಬದಲು ಈ ವೃತ್ತಿ ಇದೆ. ಹಾಸನ ಜಿಲ್ಲೆಯ ಬೇಲೂರಿನ ಅಪ್ಪಜಯ್ಯನ ಮಗ ಚೆಲುವಯ್ಯ ೧೭೨೪ರಲ್ಲಿ ಇದರ ಪ್ರತಿಮಾಡಿದ್ದಾನೆ. ಹುಳು ಕೊರೆದು ತಿಂದ ಹರಿದು ಮುರಿದ ಈ ತಾಳೆಯೋಲೆಯ ನೆರವಿನಿಂದ ಸಿದ್ಧಪಡಿಸಬೇಕಾದಾಗ ಆರಾದ ಜೈನ ಭಂಡಾರದ ತಾಳೆಯೋಲೆಯ ಸಹಾಯ ಕೂಡ ಪಡೆದಿದ್ದಾರೆ.

ಕೇಶಿರಾಜ ಹದಿಮೂರನೆಯ ಶತಮಾನದಲ್ಲಿ ಆಗಿ ಹೋದ ಹಿರಿಯ ವೈಯಾಕರಣನೆಂದು ಹೇಳಿದೆ. ಆ ವೇಳೆಗೆ ಕನ್ನಡ ಭಾಷೆಯ 'ಪೂರ್ವದ ಹಳಗನ್ನಡ' ಹಾಗೂ 'ಹಳಗನ್ನಡ' ಅವಸ್ಥಾಂತರಗಳು ಮುಗಿದು ಹೋಗಿ ಮೂರನೆಯದಾದ ನಡುಗನ್ನಡ ಅವಸ್ಥಾಂತರ ನಡೆಯುತ್ತಿತ್ತು. ಕೇಶಿರಾಜ ತನ್ನ ಕಾಲದ ಕನ್ನಡ ಭಾಷೆಗೆ ವ್ಯಾಕರಣ ಬರೆಯಲಿಲ್ಲ. ತಾನು ಚೆನ್ನಾಗಿ ಅಭ್ಯಾಸ ಮಾಡಿದ್ದ ಹಳಗನ್ನಡ ಭಾಷೆಗೆ ವ್ಯಾಕರಣ ರಚಿಸಿದ್ದಾನೆ. ತನ್ನ ವ್ಯಾಕರಣಕ್ಕೆ ದತ್ತವಾಗಿ ಯಾರ ಸುಮಾರ್ಗವನ್ನು ಸ್ವೀಕರಿಸಿದ್ದಾನೆಯೊ ಅದನ್ನು

ಗಜಗನ ಗುಣನಂದಿಯ ಮನ
ಸಿಜನಸಗನ ಚಂದ್ರಭಟ್ಟಗುಣವರ್ಮ ಶ್ರೀ
ವಿಜಯರ ಹೊನ್ನನ ಹಂಪನ
ಸುಜನೋತ್ತಂಸನ ಸುಮಾರ್ಗಮಿದಱೊಳೆ ಲಕ್ಷ್ಯಂ ॥೫॥

ಎಂಬ ಪದ್ಯದಲ್ಲಿ ತಿಳಿಸಿದ್ದಾನೆ ಸುಮಾರು ೯೦೦ ಪ್ರಯೋಗಗಳಿವೆ. ಇದರಲ್ಲಿ ಹೇಳದ ಇನ್ನೂ ಕೆಲವು ಕವಿಗಳಿಂದಲೂ ಶಾಸನಗಳಿಂದಲೂ ಪ್ರಯೋಗಗಳನ್ನು ಎತ್ತಿಕೊಟ್ಟಿದ್ದಾನೆ. ಇವರೆಲ್ಲ ಹನ್ನೆರಡನೆಯ ಶತಮಾನಕ್ಕಿಂತ ಹಿಂದಿನವರು, ಹಳಗನ್ನಡದ ವಲಯದವರು. ಹೀಗಾಗಿ ಶಬ್ದಮಣಿದರ್ಪಣ ಹಳಗನ್ನಡದ ವರ್ಣನಾತ್ಮಕ ವ್ಯಾಕರಣವಾಗಿದ್ದು ಅಲ್ಲಲ್ಲಿ ವಿಧಾಯಾತ್ಮಕ ಮನೋವೃತ್ತಿಗೆಡೆ ಮಾಡಿಕೊಟ್ಟಿದೆ. ನಾಗವರ್ಮನ ಶಬ್ದಸ್ಮೃತಿಯ ಸ್ಮೃತಿಪಥದಲ್ಲೇ ಕೇಶಿರಾಜ ಹೆಜ್ಜೆ ಹಾಕಿದ್ದಾನೆ. ಪಾಣಿನಿ, ಐಂದ್ರ ವ್ಯಾಕರಣದ ಛಾಯೆಗಳೂ ಇವೆ, ಕ್ವಚಿತ್ತಾಗಿ ಕೇಶಿರಾಜ ಸ್ವತಂತ್ರ ದೃಷ್ಟಿಯ ವ್ಯಾಕರಣಕಾರ ಕೂಡ, ತನ್ನೆದುರಿನಲ್ಲಿ ಅಪಾರ ಗ್ರಂಥರಾಶಿ ಇಟ್ಟುಕೊಂಡಿದ್ದ. ಇದರಿಂದ ಉದಾಹರಣೆಗಳು ಸಮೃದ್ಧವಾಗಿ ಒದಗಿ ಬರಲು ಸಹಾಯವಾಯಿತು. ಹಳೆಯ ನಿಯಮಗಳ ಜೊತೆಗೆ ಉದಾಹರಣೆ ಬಲದಿಂದ ಹೊಸ ನಿಯಮ ನಿರೂಪಿಸಿದ್ದಾನೆ. ತದ್ಭವ ಪ್ರಕರಣದಲ್ಲಿ ಪ್ರಾಕೃತ ವ್ಯಾಕರಣಗಳ ಪ್ರಯೋಜನ ಪಡೆದಿರಬಹುದು. ಹೇಮಚಂದ್ರ-ಕೇಶಿರಾಜನ ಸಮಕಾಲಿನತ್ವ ಗಮನಾರ್ಹ.

ಶಬ್ದಮಣಿದರ್ಪಣದಲ್ಲಿ ಕೇಶಿರಾಜನ ಸ್ವೋಪಜ್ಞತೆಯಿದೆ. ಬೇರೆ ಯಾವ ಕನ್ನಡ ವ್ಯಾಕರಣದಲ್ಲೂ ಸಿಗದ, ಶಬ್ದಮಣಿದರ್ಪಣದ್ದೇ ಆದ ವೈಶಿಷ್ಟ್ಯಗಳಿವೆಯಾಗಿ ಅಲ್ಲಿ ಕೇಶಿರಾಜನ ತಾಳ್ಮೆಯ ಉಪಯುಕ್ತ ಕೆಲಸ ಆತ ಕಲೆ ಹಾಕಿಕೊಟ್ಟಿರುವ ಶಬ್ದಗಳ ಪಟ್ಟಿ, ಸುಮಾರು ಸಾವಿರ ಕನ್ನಡ ಧಾತುಗಳನ್ನು ಸಂಗ್ರಹಿಸಿ ವಿಂಗಡಿಸಿ ಅರ್ಥವಿವರಣೆಯಿಂದ ಕೊಟ್ಟಿದ್ದಾನೆ; ಒಂದರ್ಥದಿಂದ ಅಯ್ದರ್ಥದವರೆಗಿನ ೧೮೦ ವಿಕಾರದ ಶಬ್ದಗಳಿವೆ; ಹಳೆಯ ಕಾವ್ಯಗಳಲ್ಲಿ ಬರುವ ೨೦೦ ಕಠಿಣ ಶಬ್ದಗಳು ಅರ್ಥದೊಡನೆ ಬಂದಿವೆ. ಸಬಿಂದುಕ-ಅಬಿಂದುಕ ಪಟ್ಟಿ. ಇಲಿ ಮಿಂಚಿ (ತ. ಎಲು ಮಿಚ್ಚೈತ)=ನಿಂಬೆ, ಬರ್ದಿಲಿ ಮಿಂಚಿ (ತ. ಪಮಿತ್ತ ಎಲುಮಿಚ್ಚೈತ)=ಹಣ್ಣಾದ ನಿಂಬೆ, ಬಱಟಿ (ತ. ವಱಟ್ಟಿ)=ಬೆರಣಿ, ಕುಳ್ಳು (ಸೂತ್ರ ೨೬೪) ಇಂಥ-ಕೆಲವು ಶಬ್ದಗಳ ಮಹತ್ವವನ್ನು ಸಂಶೋಧಕರು ಮನಗಾಣಬಹುದು. ಗಮಕ ಸಮಾಸದಿಂ........ಎಂಬಲ್ಲಿ ಕನ್ನಡ ಭಾಷೆಯ ವಿಶೇಷ ಲಕ್ಷಣದತ್ತ ಗಮನ ಸೆಳೆಯುತ್ತಾನೆ. ಕೇಶಿರಾಜನ ಕೃತಿಯಲ್ಲಿ ದೋಷಗಳೂ ಇವೆಯೆಂಬುದನ್ನು ಮರೆಯಬಾರದು. ಒಮ್ಮೊಮ್ಮೆ ಆತ ವಿಧಾಯಕ ಧೋರಣೆ ತಳೆಯುತ್ತಾನೆ. ಇಂದಿನ ಭಾಷಾವಿಜ್ಞಾನದಿಂದ ಅವನ ಮೂರು ನಾಲ್ಕು ಹೇಳಿಕೆಗಳಲ್ಲಿ ದೋಷಗಳಿವೆ. ಕೇಶಿರಾಜ ಹೇಳದ ವಿಚಾರಗಳೂ ಇವೆ. ಎರಡು ಉದಾಹರಣೆಗಳು :

೧ ಅದು, ಇದು ಎದು (ಏನ್) ಎಂಬ ಸರ್ವನಾಮಗಳಿಗೆ ಪ್ರಮಾಣಾರ್ಥದಲ್ಲಿ /—ನಿತು/ ಸೇರಿ ಅನಿತು, ಇನಿತು, ಎನಿತು ಎಂದೂ, ಪ್ರಕಾರಾರ್ಥದಲ್ಲಿ /—ನ್ತು/ ಸೇರಿ ಅಂತು, ಇಂತು, ಎಂತು ಎಂದೂ, ಕಾಲಾರ್ಥದಲ್ಲಿ /—ನ್ದು/ ಸೇರಿ ಅಂದು, ಇಂದು ಎಂದು, ಎಂದೂ ಆಗುತ್ತವೆ.

೨. ಇ ಮತ್ತು –ಉ ಸ್ತ್ರೀಲಿಂಗ ಶಬ್ದಗಳು ಪುಲ್ಲಿಂಗದಲ್ಲಿ ವಿಕಲ್ಪವಾಗಿ ಸಮರೂಪಧಾರಣೆ ಮಾಡುತ್ತವೆ: ನಾಣಿಲಿ, ಮಾತಾಳಿ.

ಇದನ್ನು ನಾಗವರ್ಮ (೭೯, ೮೦, ೭೨) ಭಟ್ಟಾಕಳಂಕ (೧೮೧, ೧೮೨, ೯೧) ಹೇಳಿದ್ದಾರೆ. ಉತ್ತರ ಮಾರ್ಗ ದಕ್ಷಿಣ ಮಾರ್ಗ ವಿಚಾರ ಕೇಶಿರಾಜ ಹೇಳಿಲ್ಲ. ಉಳಿದವರು ಹೇಳಿದ್ದಾರೆ. ನಾಗವರ್ಮನ ಶಬ್ದ ಸ್ಮೃತಿಗಿಂತ ಭಾಷಾಭೂಷಣವೂ ಭಾಷಾಭೂಷಣಕ್ಕಿಂತ ಶಬ್ದಮಣಿ ದರ್ಪಣವೂ ವಿಸ್ತಾರವಾಗಿವೆ. ನಾಗವರ್ಮನ ಸಂಸ್ಕೃತ ವ್ಯಾಕರಣವನ್ನು ಭಟ್ಟಾಕಳಂಕ ತನ್ನ ಸಂಸ್ಕೃತ ವ್ಯಾಕರಣದಲ್ಲಿ ಅನುಸರಿಸಿದ್ದಾನೆ. ಕೇಶಿರಾಜ ನಾಗವರ್ಮನ ಕನ್ನಡ ವ್ಯಾಕರಣವನ್ನೇ ಹೆಚ್ಚಾಗಿ ಅನುಸರಿಸಿದ್ದಾನೆ. ನಾಗವರ್ಮ ಭಟ್ಟಾಕಳಂಕರು ಹೇಳದೆ ಬಿಟ್ಟ ಸಮಸಂಸ್ಕೃತ, ಸಂಸ್ಕೃತಾವ್ಯಯ ಶ್ರುತಿದುಷ್ಟ ಶ್ರುತಿಕಷ್ಟ ನೇಯಾರ್ಥ ಮುಂತಾದುವನ್ನು ಕೇಶಿರಾಜ ಮತ್ತು ಕವಿರಾಜ ಮಾರ್ಗಕಾರ ಹೇಳಿದ್ದಾರೆ. ಹೀಗಾಗಿ ಕೇಶಿರಾಜನ ಶಬ್ದಮಣಿದರ್ಪಣಕ್ಕೆ ಕನ್ನಡ ಭಾಷಾ ಚರಿತ್ರೆಯಲ್ಲಿ ವಿಶಿಷ್ಟ ಸ್ಥಾನವಿದೆ. ಕವಿ ಜಿಹ್ವಾ ಬಂಧನ ಕೃತಿಯ ಕರ್ತೃವಾದ ಈಶ್ವರ ಕವಿ (೧೫೦೦) ತನ್ನನ್ನು ಅಭಿನವ ಕೇಶವನೆಂದು ಕರೆದುಕೊಂಡು ಇವನನ್ನು 'ಲಕ್ಷಣ ಶಿಕ್ಷಾಚಾರ್ಯ ಸುಲಕ್ಷಣ ಕೇಶವ' ಎಂದು ಕೊಂಡಿದ್ದಾನೆ. ಮನ್ಮಥ ವಿಜಯದ ಕರ್ತೃ ಕವಿ ಮಲ್ಲ (೧೪೦೦) ಎಂಬಾತ

ನಿರುತಂ ಕರ್ನಾಟಕದೊಳ್
ಪರಿಕಿಸೆ ಶಬ್ದಜ್ಞನಾವನೊರ್ವನೆ ಲೋಕ।
ಕ್ಕರಿದಲ್ತೆ ಭಾಪುಕವಿ ಕುಂ
ಜರ ಕೇಶವರಾಜ ಗೋಚರಿಸು ಮನ್ಮನದೊಳ್

ಎಂದು ಪ್ರಾರ್ಥಿಸಿದ್ದಾನೆ.

ಕನ್ನಡ ವ್ಯಾಕರಣ ಕೃತಿಗಳಲ್ಲಿ ಶಬ್ದಮಣಿದರ್ಪಣಕ್ಕಿರುವ ಮಾನ್ಯತೆಯನ್ನು ಮೇಲಿನ ಪದ್ಯ ಕನ್ನಡಿಸುತ್ತದೆ. ಸಂಸ್ಕೃತದಲ್ಲಿ ಪಾಣಿನಿಯ ಅಷ್ಟಾಧ್ಯಾಯಿಗಿರುವ ಮಹತ್ವ ಕನ್ನಡದಲ್ಲಿ ಕೇಶಿರಾಜನ ಶಬ್ದಮಣಿದರ್ಪಣಕ್ಕಿದೆ. ಕೇಶಿರಾಜ ಕನ್ನಡದ ಪಾಣಿನಿ.

ಕೇಶಿರಾಜವನ್ನೂ ಅವನ ಶಬ್ದಮಣಿದರ್ಪಣವನ್ನೂ ಕುರಿತ ಕೆಲವು ಕನ್ನಡ ಬರೆಹಗಳು :

೧. ಆಲೋಕ, ಡಾ॥ ಬಿಳಿಗಿರಿ (ಭಾಗ–೧) ೧೯೬೯
೨. ಕೇಶಿರಾಜ, ಶ್ರೀನಿವಾಸನ್ ೧೯೭೧
೩. ಶಬ್ದಮಣಿದರ್ಪಣ ದಿಗ್ದರ್ಶನ, ದೊಡ್ಡಸ್ವಾಮಿ ೧೯೬೯
೪. ಶಬ್ದಮಣಿದರ್ಪಣ ವಿಳಾಸ, ಡಾ॥ ಶಿವಾನಂದ ೧೯೭೨
೫. ದರ್ಪಣಾವಲೋಕನ, ಹಂಪ ನಾಗರಾಜಯ್ಯ ಕನ್ನಡನುಡಿ ೧೯೬೮
೬. ಶಬ್ದಮಣಿದರ್ಪಣ ಪಾಠಾಂತರಗಳು, ಡಿ. ಕೆ. ಭೀಮಸೇನರಾವ್
೭. ಕೇಶಿರಾಜ ಮತ್ತು ಶಬ್ದಮಣಿದರ್ಪಣ, ಹಂಪನಾ, ವೀರಭಾರತಿ–೧೯೬೧
೮. ಕನ್ನಡದಲ್ಲಿ ಭಾಷಾವಿಜ್ಞಾನದ ಬೆಳವಣಿಗೆ, ಹಂಪನ ಚಿನ್ನದ ಬೆಳಸು–೧೯೭೧

ಅಣು ಶಕ್ತಿ ಪ್ರಯೋಗದಲ್ಲಿ ಭಾರತದ ಪ್ರಗತಿ

—ಕ್ಯಾಪ್ಟನ್ ಎಂ. ಜಿ. ಕೆ. ಮೂರ್ತಿ

ಇದು ಪರಮಾಣು ಯುಗ. ಪರಮಾಣುಗಳಿಗಿರುವ ಶಕ್ತಿ ಅಗಾಧವಾದುದು. ಈ ಶಕ್ತಿಯನ್ನು ಶಾಂತಿವೃತ್ತಿಗಾಗಿ, ಜಗತ್ತಿನ ಹಿತಕ್ಕಾಗಿ ಪ್ರಯೋಗಿಸಲು ಪ್ರಪಂಚದಲ್ಲಿ ಅನೇಕ ಅಣುಕೇಂದ್ರಗಳು ಸ್ಥಾಪಿತಗೊಂಡಿವೆ. ಈ ವಿಷಯದಲ್ಲಿ ಭಾರತವೂ ವಿವಿಧ ಅಣುಸಂಸ್ಥೆಗಳನ್ನು ತೆರೆಯುವುದರಮುಖಾಂತರ ಅತ್ಯುನ್ನತ ಪ್ರಗತಿಯನ್ನು ಸಾಧಿಸಲಾಗಿದೆ. ಅದನ್ನು ಮಾನ್ಯ ಲೇಖಕರು ಓದುಗರ ಮುಂದಿಟ್ಟಿರುತ್ತಾರೆ.

ಸಂ.

ಪರಮಾಣುಗಳಿಂದ ಉದ್ಭವಿಸುವ ಶಕ್ತಿಗೆ ಮಿತಿಯಿಲ್ಲ. ಹಿರೋಷಿಮಾ ನಗರದ ಮೇಲೆ ೧೯೪೫ರಲ್ಲಿ ಸಿಡಿದ ಒಂದೇಒಂದು ಅಣು ಬಾಂಬು ಒಂದು ಅಗ್ನಿಜ್ವಾಲೆಯನ್ನು ಸ್ಫುರಿಸಿತು. ಒಂದು ಕೋಟಿ ಡಿಗ್ರಿಯ ಉಷ್ಣತೆಯು ಜನರನ್ನೂ, ವಸ್ತುಗಳನ್ನೂ ಕೂಡಲೆ ಆವಿಯನ್ನಾಗಿ ಮಾಡಿತು. ಭೂಮಿ ಕಂಪಿಸಿತು. ಕುದಿಯುವ ಹೊಗೆಯ ಮೋಡ ಹಲವು ಮೈಲೆತ್ತರ ಎದ್ದು, ಪಟ್ಟಣವನ್ನೆಲ್ಲಾ ಆವರಿಸಿತು. ಸುಡುವ ಗಾಳಿ ಎದ್ದಿತು. ಭೀಕರ ಆರ್ಭಟೆ, ೭೮,೧೫೦ ಜನರು ಆಹುತಿಯಾದರು, ೧೩,೯೮೩ ಜನರ ಪತ್ತೆಯೇ ಇಲ್ಲ. ಜನರು ಬಾಂಡಲೆಯಲ್ಲಿ ಹುರಿದಂತಾಗಿ ಚರ್ಮವು ಮಾಂಸದಿಂದ ತೂಗಾಡುತ್ತಿತ್ತು. ಉಕ್ಕಿನಭಾರಿ ಗರ್ಡರ್‌ಗಳು ಕೊಂಕಾಗಿ ಮುರಿದು ಮುರಿಗೆ ತಿರುಗಿದವು. ಗಾಜೂ, ಛಾವಣಿಯ ಹೆಂಚುಗಳೂ ಕರಗಿ ಅಗ್ನಿ ಪ್ರವಾಹದಂತೆ ಹರಿದವು. ನಾಲ್ಕು ಮೈಲಿ ದೂರ ಟೆಲಿಫೋನ್ ಕಂಬಗಳು ಇದ್ದಲಿನಂತೆ ಸೀದುಹೋದವು. ೧೯೫೨ ರಲ್ಲಿ ಶಾಂತಸಾಗರದ ಎನಿಲ್‌ವಿಟಾಸ್ ದ್ವೀಪದ ಮೇಲೆ ಸ್ಫೋಟಿಸಿದ ಹೈಡ್ರೋಜನ್ ಬಾಂಬಿನಿಂದ ಇಡೀ ದ್ವೀಪವು ಕರಗಿ ಕುದಿಯಿತು.

ವಿಜ್ಞಾನಿಗಳೂ, ಎಂಜನಿಯರುಗಳೂ ಇಂಥಾ ಉಗ್ರ ರಾಕ್ಷಸ ಶಕ್ತಿಯನ್ನು ಪಳಗಿಸಿ ಶಾಂತ ವೃತ್ತಿಗಳಿಗೂ, ಜಗತ್ತಿನ ಅಭ್ಯುದಯಕ್ಕೂ ಪ್ರಯೋಗಿಸಿದ್ದಾರೆ. ಈ ವಿಷಯದಲ್ಲಿ ಭಾರತವು ಅತ್ಯುನ್ನತ ಪ್ರಗತಿಯನ್ನು ಪಡೆದು, ಬಹು ಮುಂದುವರಿದ ಪಾಶ್ಚಾತ್ಯ ದೇಶಗಳಿಗೆ ಸರಿಸಮಾನವಾಗಿದೆ.

ಅಟಾಮಿಕ್ ಎನರ್ಜೀ ಕಮಿಷನ್ ಎಂಬ ಸಂಸ್ಥೆಯು ೧೯೪೮ರಲ್ಲಿ ದಿವಂಗತ ಡಾ. ಹೋಮಿ ಬಾಬಾರವರ ಅಧ್ಯಕ್ಷತೆಯಲ್ಲಿ ಭಾರತದಲ್ಲಿ ಸ್ಥಾಪಿತವಾಯಿತು. ಅಣುಶಕ್ತಿಗೆ ಸಂಬಂಧಿಸಿದ ಭೌತಿಕ ಶಾಸ್ತ್ರ, ಎಲೆಕ್ಟ್ರಾನಿಕ್ಸ್ ಯೋಜನೆಗಳಲ್ಲಿ ಸಿಬ್ಬಂದಿಗೆ ತರಭೇತಿ ಕೊಡಲು ಬೊಂಬಾಯಿಯ "ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್"ನಲ್ಲಿ ಏರ್ಪಾಟಾಯಿತು. ರಸಾಯನ ಶಾಸ್ತ್ರ, ಖನಿಜಶಾಸ್ತ್ರಗಳ ಅನ್ವೇಷಣೆ ಬೇರೆ ಸ್ಥಳದಲ್ಲಿ ಶೋಧನೆ ಬೊಂಬಾಯಿಯ "ಇಂಡಿಯನ್ ಕ್ಯಾನ್ಸರ್ ರಿಸರ್ಚ್ ಸೆಂಟರ್"ನಲ್ಲಿ ಜರುಗಿತು.

ಅಣುಶಕ್ತಿಯ ಉತ್ಪತ್ತಿಗೆ ಅವಶ್ಯವಾದ ಖನಿಜ ವಸ್ತುಗಳನ್ನು ಶೋಧಿಸಲು Rare minerals Survey Unit ಸ್ಥಾಪಿತವಾಯಿತು. ಅದು ಬಹಳ ಕೆಲಸ ಮಾಡಿ ಅಟಾಮಿಕ್ ಮಿನರಲ್ಸ್ ಶಾಖೆಯು ಬೆಳೆಯಿತು. ಕೇರಳ ಪ್ರಾಂತದ ಸಮುದ್ರ ತೀರದ ಮರಳಿನಲ್ಲಿ ಸಿಕ್ಕಿದ್ದ ಯುರೇನಿಯಂ ಖನಿಜದ ಪ್ರಮಾಣವು ಪ್ರಪಂಚದಲ್ಲೆಲ್ಲಾ ಅತ್ಯಂತ ಭಾರಿಯಾದುದೆಂದು ಅದುವರೆಗೂ ಗಣಿಸಲ್ಪಟ್ಟಿತ್ತು. ಆದಕ್ಕಿಂತಲೂ ಭಾರಿ ಯುರೇನಿಯಂ ನಿಕ್ಷೇಪಗಳು ಬಿಹಾರ್ ಪ್ರಾಂತದ ಜಾದುಗುಡಾ ಎಂಬ ಕ್ಷೇತ್ರದಲ್ಲಿ ಕಂಡುಹಿಡಿಯಲ್ಪಟ್ಟವು. ಅಲ್ಲಿನ ಗಣಿಯಲ್ಲಿ ಕೆಲಸ ನಡೆಯುತ್ತಿದೆ. ಪ್ರತಿದಿನವೂ ೧೦೦೦ ಟನ್ ನಡೆಯಿತು. ಪ್ರಾಣಿಶಾಸ್ತ್ರ, ವೈದ್ಯಶಾಸ್ತ್ರ ವಿಷಯಗಳ

ಯುರೇನಿಯಮ್ಮನ್ನು ತಯಾರಿಸಲು ಯುರೇನಿಯಂ ಅದುರಿನ ಮಿಲ್ಲು ನಿರ್ಮಾಣವಾಗುತ್ತಿದೆ. ಥೋರಿಯಂ ಲೋಹವಿರುವ ಪ್ರಶಸ್ತವಾದ ಬೆರಿಲ್ ಮತ್ತು ಲಿಥಿಯಂ ಅದುರುಗಳೂ ಸಿಕ್ಕಿವೆ.

ಕೇರಳ ಸಮುದ್ರ ತೀರದ ಮರಳಿನಿಂದ ಅನೇಕ ಖಾಸಗಿ ಕಂಪೆನಿಗಳು ೧೯೧೧ರಿಂದ ಇಲ್‌ಮೆನೈಟ್, ಮಾನಸೈಟ್, ಸರ್ಕಾನ್ ಮುಂತಾದ ಸತ್ವಗಳನ್ನು ತೆಗೆದು ಅವುಗಳನ್ನು ವಿದೇಶಗಳಿಗೆ ರಫ್ತು ಮಾಡುತ್ತಿದ್ದವು. ಕೇಂದ್ರ ಸರ್ಕಾರವೂ ಕೇರಳ ಸರ್ಕಾರವೂ ಒಟ್ಟಾಗಿ ೧೯೫೦ ರಲ್ಲಿ "ಇಂಡಿಯನ್ ರೇರ್ ಅರ್ತ್ಸ್ ಲಿಮಿಟೆಡ್" ಎಂಬ ಕಂಪನಿಯನ್ನು ಸ್ಥಾಪಿಸಿ ಮಾನಸೈಟ್‌ನಿಂದ ಅಪೂರ್ವ ಮಣ್ಣನ್ನು ಬೇರ್ಪಡಿಸಲು ಆಲ್ವಾಯೆ ಎಂಹ ಊರಿನಲ್ಲಿ ಯಂತ್ರವನ್ನು ಸ್ಥಾಪಿಸಿದರು. ಅದನ್ನು ಫ್ರಾನ್ಸ್, ಜರ್ಮನಿ, ಇಟಲಿ, ಜಪಾನ್, ಆಸ್ಟ್ರೀಯ ಮುಂತಾದ ದೇಶಗಳಿಗೆ ರಫ್ತು ಮಾಡಿ ಎರಡು ವರ್ಷಗಳಲ್ಲಿ ಮೂರು ಕೋಟಿ ರೂಪಾಯಿ ವಿದೇಶಿ ವಿನಿಮಯ ಉಳಿತಾಯವಾಯಿತು. ಉಳಿದ ವಸ್ತುವಿನಲ್ಲಿದ್ದ ಥೋರಿಯಂ ಯುರೇನಿಯಂಗಳನ್ನು ಪ್ರತ್ಯೇಕಿಸಲು ಬೊಂಬಾಯಿ ಬಳಿ ಇರುವ ಟ್ರೋಂಬೆ ಎಂಬ ಸ್ಥಳದಲ್ಲಿ ೧೯೫೫ ರಲ್ಲಿ ಯಂತ್ರಸ್ಥಾಪನೆಯಾಯಿತು. ಥೋರಿಯಂ ನೈಟ್ರೇಟ್‌ನ್ನು ಕೈಗಾರಿಕೆಗಳಿಗೆ ಬಳಸಲು ಬರ್ಮ, ಜರ್ಮನಿ, ಸ್ವಿಟ್ಜರ್ಲೆಂಡ್, ಇಂಗ್ಲೆಂಡ್, ಅಮೇರಿಕಗಳಿಗೆ ರಫ್ತು ಮಾಡಿ ೨.೨ ಕೋಟಿ ರೂಪಾಯಿಗಳ ವಿದೇಶಿ ವಿನಿಮಯ ದೊರಕಿತು.

ಅಣುಶಕ್ತಿಯ ಶಾಂತ ಪ್ರಯೋಗಗಳಿಗೆ ಬೇಕಾದ ಸಂಪೂರ್ಣ ಕಾರ್ಯಕ್ರಮಗಳನ್ನು ಭಾರತದಲ್ಲೇ ಕೈಗೊಳ್ಳಲು ೧೯೫೪ ರಲ್ಲಿ "ಅಟಾಮಿಕ್ ಎನರ್ಜಿ ಎಸ್ಟಾಬ್ಲಿಷ್‌ಮೆಂಟ್" ಎಂಬ ಸಂಸ್ಥೆಯು ಟ್ರೊಂಬೆಯಲ್ಲಿ ಪ್ರತಿಷ್ಠಿತವಾಯಿತು. ಇದಕ್ಕಾಗಿಯೇ ಪ್ರತ್ಯೇಕ ಮಂತ್ರಿ ಮಂಡಲವೇರ್ಪಟ್ಟಿತು "ಅಪ್ಸರ"ವೆಂಬ ಹೆಸರಿನ ರೀಆಕ್ಟರ್ ಎಂಬ ಅಣು ಶಕ್ತಿಯ ಒಲೆಯು ೧೯೫೬ ರಲ್ಲಿ ರಚಿಸಲ್ಪಟ್ಟಿತು. ಇಡೀ ಏಷ್ಯಾ ಖಂಡದಲ್ಲಿ ಇದೇ ಪ್ರಪ್ರಥಮ ರಚನೆ. ೧೯೬೦ ರಲ್ಲಿ ಸಿ. ಐ. ಆರ್. ಎಂಬ ಏಳು ಕೋಟಿ ರೂಪಾಯಿ ವ್ಯಯದ ರೀಆಕ್ಟರ್ ಕಟ್ಟಲ್ಪಟ್ಟಿತು. ಇದರಲ್ಲಿ ಕೆನಡಾ ದೇಶದ ದ್ರವ್ಯ ಸಹಾಯವಿದ್ದರೂ, ತೊಡಕಾದ ಕಾರ್ಯಗಳನ್ನೆಲ್ಲಾ ಭಾರತೀಯ ವಿಜ್ಞಾನಿಗಳೂ, ಎಂಜನಿಯರಗಳೂ ನಿರ್ವಹಿಸಿದರು. "ಜರ್ಲಿನಾ" ಎಂಬ ಹೆಸರಿನ ಮೂರನೇ ರೀಆಕ್ಟರನ್ನು ಭಾರತೀಯ ವಿಜ್ಞಾನಿಗಳೇ ೧೯೬೧ ರಲ್ಲಿ ನಿರ್ಮಿಸಿದರು. ಇವುಗಳ ಬಹು ತೊಡಕಾದ ನಿಯಂತ್ರಣ ಪರಿಕರಗಳೂ, ಸುರಕ್ಷಣೆಯ ತಂತ್ರಗಳೂ, ಟ್ರೊಂಬೆಯಲ್ಲೇ ತಯಾರಾದವು. ರೀಆಕ್ಟರ್‌ಗಳಲ್ಲಿ ಉರಿಸಲು ಬೇಕಾದ ವಿಶೇಷ ಗುಣದ ಇಂದನಗಳು ಇಲ್ಲೇ ತಯಾರಾದವು; ಅವು ವಿದೇಶಗಳ ಇಂದನಗಳಿಗಿಂತಲೂ ಶ್ರೇಷ್ಠ. ಪಿಥೋರಿಯಂ ಯಂತ್ರದಿಂದ ಬಂದ ಪದಾರ್ಥಗಳಿಂದ ಯುರೇನಿಯಂ ಗಟ್ಟಿಗಳು ತಯಾರಾಗುವ ವ್ಯವಸ್ಥೆ ಇದೆ. ಇಲ್ಲಿಯ ಯುರೇನಿಯಂ ಬೇರೆ ದೇಶದವುಗಳಿಗಿಂತಲೂ ಉತ್ತಮ. ಭಾರತದಲ್ಲಿರುವ ಥೋರಿಯಂ ಪೃಥ್ವಿಯಲ್ಲೆಲ್ಲ ಅಧಿಕ ಪ್ರಮಾಣದಲ್ಲಿವೆ. ಬಹು ಅಮೌಲ್ಯವಾದ ಪ್ಲುಟೋನಿಯಂ ಧಾತುವನ್ನು ತಯಾರಿಸಲು ೩ ಕೋಟಿ ರೂಪಾಯಿ ವೆಚ್ಚದ ಯಂತ್ರವನ್ನು ಟ್ರೊಂಬೆಯ ಎಂಜಿನಿಯರುಗಳು ನಿರ್ಮಿಸಿದರು. ದಿವಂಗತ ಲಾಲ್ ಬಹದ್ದೂರ್ ಶಾಸ್ತ್ರಿಯವರು ಉದ್ಘಾಟಿಸಿದರು. ರೀಆಕ್ಟರ್‌ಗಳಿಗೆ ಬೇಕಾದ "ಭಾರದ ನೀರನ್ನು" (heavy water) ತಯಾರಿಸಲು (ನಂಗಲ್‌ನಲ್ಲಿ ನಡೆಯುತ್ತಿರುವ ಫರ್ಟಿಲೈಸರ್ ಯೋಜನೆಯಲ್ಲಿ ಟ್ರೋಂಬೆ ಸಂಸ್ಥೆಯವರು ಸ್ಥಾಪಿಸಿರುವ ಯಂತ್ರದಿಂದ) ವರ್ಷಂಪ್ರತಿ ೧೪ ಟನ್ "ಭಾರದ ನೀರು" ಉತ್ಪತ್ತಿಯಾಗುತ್ತದೆ.

ವೈದ್ಯಕೀಯ, ವ್ಯವಸಾಯಕ, ಕೈಗಾರಿಕಾ, ವೈಜ್ಞಾನಿಕ ಕ್ಷೇತ್ರಗಳಲ್ಲಿ ಮಹಾ ಕ್ರಾಂತಿಯನ್ನುಂಟು ಮಾಡಿರುವ ರೇಡಿಯೋ ಐಸೋಟೋಪ್ ಎಂಬ ಅದ್ಭುತ ಉಪಕರಣಗಳು ಇಲ್ಲಿ ತಯಾರಾಗುತ್ತವೆ. ಕಬ್ಬಿಣ, ಇಂಗಾಲ, ಅಯೋಡಿನ್, ಚಿನ್ನ, ರಂಜಕ, ಕೋಬಾಲ್ಟ್ ಮುಂತಾದ ರಾಸಾಯನಿಕ ಮೂಲವಸ್ತುಗಳನ್ನು ಅಣುಶಕ್ತಿಯ ರೀಆಕ್ಟರ್‌ನಲ್ಲಿಟ್ಟು ಅವುಗಳ ಮೇಲೆ ನ್ಯೂಟ್ರಾನ್ ಕಣಗಳನ್ನು ದೀರ್ಘಕಾಲ ಬಡಿದರೆ, ಅವುಗಳ ಅಣು-ರಚನೆಯಲ್ಲಿ ಮಾರ್ಪಾಟಾಗಿ, ಅವು ವಿದ್ಯುತ್‌ವಿಕಿರಣ (Radio-activity) ವನ್ನು ಹೊಂದಿ ರೇಡಿಯೋ ಐಸೋಟೋಪ್‌ಗಳಾಗಿ ಬದಲಿಸುತ್ತವೆ. ಅವುಗಳಿಂದ ಪ್ರಸಾರವಾಗುವ ರೇಡಿಯೋಕಿರಣಗಳು ನೂರಾರು ವಿಸ್ಮಯಗಳನ್ನು ಪ್ರದರ್ಶಿಸುತ್ತಿವೆ. ಟ್ರೊಂಬೆಯಲ್ಲಿ ೩೫೦ಕ್ಕಿಂತಲೂ ಹೆಚ್ಚು ಬಗೆ ಐಸೋಟೋಪ್‌ಗಳನ್ನು

ಕೈಗಾರಿಸುತ್ತಾರೆ. ಅವು ಈ ದೇಶದ ಉಪಯೋಗಕ್ಕೂ ಸಾಕಾಗಿ, ಆಸ್ಟ್ರೇಲಿಯ, ಶ್ರೀ ಲಂಕಾ, ಆಫ್‌ಗನ್‌ಸ್ಥಾನ, ತಾಯ್‌ಲ್ಯಾಂಡ್ ಮೊದಲಾದ ದೇಶಗಳಿಗೆ ರಫ್ತಾಗುತ್ತವೆ. ಕಳೆದಒಂಭತ್ತು ವರ್ಷಗಳಲ್ಲಿ ೧೫,೦೦೦ ಹಡಗುಗಳಷ್ಟು ಸರಕು ಭಾರತದಿಂದ ಹೋಗಿದೆ.

ವೈದ್ಯಕೀಯ ಪ್ರಯೋಗ

ರೋಗಿಯು ಐಸೋಟೋಪನ್ನು ನುಂಗಿದರೆ ಅದರ ಕಿರಣಗಳು ರೋಗ ಪರೀಕ್ಷೆ ಮಾಡಿ ರೋಗಗಳನ್ನು ಗುಣ ಮಾಡುತ್ತವೆ. "ಗೆಯ್‌ಗರ್" ಎಂಬ ಉಪಕರಣವು ಆ ಕಿರಣಗಳನ್ನು ಪತ್ತೆ ಮಾಡುತ್ತದೆ. ಆದ್ದರಿಂದ ಐಸೋಟೋಪ್ ರೋಗಿಯ ಶರೀರದೊಳಗೆ ಎಲ್ಲೆಲ್ಲಿ ಸಂಚಲಿಸುತ್ತದೆಂಬುದನ್ನು ನೋಡಿ ಮನುಷ್ಯ ಶರೀರದೊಳಗೆ, ಪ್ರಾಣಿಗಳಲ್ಲಿ, ಸಸ್ಯಗಳಲ್ಲಿ ಏನೇನು ಆಗುತ್ತವೆಂಬುದನ್ನು ಅರಿಯಬಹುದು. ರಕ್ತದೊಳಗಿನ ಕಬ್ಬಿಣ,ಮೆದುಳಿನ ರಂಜಕ, ಥೈರಾಯ್ಡ್ ಗ್ರಂಥಿಯ ಅಯೋಡಿನ್‌ಗಳು ಹರಿಯುವುದನ್ನೂ ಅವುಗಳ ಪ್ರಮಾಣವನ್ನೂ ವೀಕ್ಷಿಸಿ, ನ್ಯೂನತೆಯನ್ನು ಪರಿಹರಿಸಲು ಸಾಧ್ಯ. ಸ್ವಲ್ಪ ರೇಡಿಯೋ ಅಯೋಡಿನ್ನನ್ನು ರೋಗಿಯು ನುಂಗಿದರೆ, ಹೊರಗಿನ ಯಂತ್ರವು ತಂತಾನೇ ಒಳಸ್ಥಿತಿಯ ನಕ್ಷೆಯನ್ನು ರೇಖಿಸಿ ಗ್ರಂಥಿಯ ಪರಿಸ್ಥಿತಿಯನ್ನು ಹೊರಪಡಿಸುತ್ತದೆ. ಗ್ರಂಥಿಯು ಹೆಚ್ಚಾಗಿ ಬೆಳೆದಿದ್ದರೆ ಕಿರಣಗಳು ಅದನ್ನು ಕರಗಿಸಿ ಸರಿಪಡಿಸುತ್ತವೆ. ರೇಡಿಯೋಕ್ರೋಮಿಯಂ ಶರೀರದೊಳಗಿನ ರಕ್ತಾಭಿಸರಣೆಯನ್ನು ತೋರಿಸಿ, ಸುಟ್ಟಾಗ ಅಥವ ರಕ್ತಸ್ರಾವವಾದಾಗ ಎಷ್ಟು ರಕ್ತ ಹೋಯಿತೆಂದು ಪತ್ತೆ ಮಾಡುತ್ತದೆ. ಶಸ್ತ್ರ ಚಿಕಿತ್ಸೆಯಲ್ಲಿ ಎಷ್ಟು ರಕ್ತ ಸುರಿಯಿತೆಂದು ಅಳೆಯುತ್ತದೆ. ಇಡೀ ಮನುಷ್ಯ ಶರೀರದಲ್ಲಿರುವ ಕಬ್ಬಿಣದ ನ್ಯೂನತೆ, ಶರೀರ ದ್ರವದ ಮತ್ತು ರಕ್ತ-ಪ್ಲಾಸ್ಮಾದ ಪರಿಮಾಣ, ಕೆಂಪು ರಕ್ತ ಕಣಗಳ ಸಂಖ್ಯೆ ಶರೀರದ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ರಕ್ತ ಚಲಿಸುವ ಕಾಲಗಳನ್ನು ಅಳೆಯಲು ಸಾಧ್ಯ.

"ಆರ್ಸನಿಕ್ ಐಸೋಟೋಪ್" ಮೆದುಳಿನ ಗಡ್ಡೆಗಳಿರುವ ಸ್ಥಳವನ್ನು ತೋರಿಸುತ್ತದೆ. ರಂಜಕದ ಐಸೋಟೋಪನ್ನು ಹೀರಿರುವ ಕ್ಯಾನ್ಸರ್ ಟಿಷ್ಯುಗಳು ಒಳಗಿನಿಂದ ಪ್ರಸಾರ ಮಾಡುವ ವಿದ್ಯುತ್‌ವಿಕಿರಣ ಸಿಗ್ನಲ್‌ಗಳನ್ನು ಹೊರಗಿನ ಉಪಕರಣವು ಬರೆದಿಡುತ್ತದೆ. ಅದನ್ನು ನೋಡಿಕೊಂಡು ವೈದ್ಯರು ಶಸ್ತ್ರ ಚಿಕಿತ್ಸೆ ಮಾಡುತ್ತಾರೆ. ಕೆಂಪು ರಕ್ತ ಕೋಶಗಳು ಹೆಚ್ಚಾದಾಗ ಬರುವ ರಕ್ತದ ಕ್ಯಾನ್ಸರನ್ನು ರಂಜಕ-ಐಸೋಟೋಪ್ ಅಥವಾ "ರೇಡಿಯೋ-ಕೋಬಾಲ್ಟ್" ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಕ್ಷ-ಕಿರಣ ಯಂತ್ರದಂತೆ ಕ್ಯಾನ್ಸರ್ ಕೋಶಗಳನ್ನು ನಾಶಮಾಡುತ್ತದೆ. ಅದರಿಂದ ಹೊರಡುವ ಗ್ಯಾಮಾಕಿರಣಗಳು ಆಳವಾಗಿ ತೂರಿ ಹೋಗುವುದರಿಂದ ಶರೀರದ ಅಂತರಾಳದಲ್ಲಿರುವ ಕ್ಯಾನ್ಸರ್ ಗಡ್ಡೆಗಳ ಚಿಕಿತ್ಸೆಗೆ ಅದು ಕ್ಷ-ಕಿರಣಗಳಿಗಿಂತ ಉತ್ತಮ. "ರೇಡಿಯೋ ಚಿನ್ನ" ಓವರಿ ಕ್ಯಾನ್ಸರ್‌ನಲ್ಲಾಗುವ ದ್ರವಗಳನ್ನು ನಿಲ್ಲಿಸುತ್ತದೆ. ಮತ್ತು ಪ್ರಾಸ್ಟೇಟ್ ಗ್ರಂಥಿಯಿಂದಾಗುವ ತೊಂದರೆಯನ್ನು ನಿವಾರಿಸುತ್ತದೆ. "ಸ್ಟ್ರಾಂಟಿಯಂ ಐಸೋಟೋಪ್" ಕಣ್ಣು ರೆಪ್ಪೆಗಳ ಕ್ಯಾನ್ಸರನ್ನೂ, ಕಣ್ಣು ಗುಡ್ಡಿನ ನೋವಿನ ವ್ರಣವನ್ನೂ ಮತ್ತು ಕಣ್ಣಿನ ಇತರ ಕೆಲವು ತೊಡಕುಗಳನ್ನು ಸರಿಪಡಿಸುತ್ತವೆ. ಐಸೋಟೋಪ್‌ಗಳು ಸ್ತನದ ಕ್ಯಾನ್ಸರ್ ಬೆಳವಣಿಗೆಯನ್ನು ನಾಶಮಾಡುತ್ತವೆ.

ಬೊಂಬಾಯಿಯ "ಅಟಾಮಿಕ್ ಎನರ್ಜಿ" ಸಂಸ್ಥೆಯ "ರೇಡಿಯೇಷನ್ ಔಷಧಿ ಶಾಖೆಯು" ಐಸೋಟೋಪ್‌ಗಳಿಂದ ರೋಗಗಳನ್ನು ಪರೀಕ್ಷಿಸಲು ನವೀನ ಕಲಾಕೌಶಲಗಳನ್ನು ಶೋಧಿಸಿದೆ. ಅಯೋಡಿನ್ ಅಥವ ಪಾದರಸದ ಐಸೋಟೋಪ್‌ಗಳಿಂದ ಯಕೃತ್ತು, ಮೂತ್ರ ಜನಕಾಂಗ ಮತ್ತು ಇತರ ಇಂದ್ರಿಯಗಳ ವ್ಯಾಧಿಗಳು ಪರೀಕ್ಷಿಸಲ್ಪಡುತ್ತಿವೆ. ಕೋಬಾಲ್ಟ್-೫೮ ವಿವಿಧ ರಕ್ತ ಕೊರತೆಗಳನ್ನು ಪತ್ತೆ ಮಾಡುತ್ತದೆ. ಟ್ರೋಂಬೆಯ "ಬಾಬಾ ಅಟಾಮಿಕ್ ರಿಸರ್ಚ್ ಸೆಂಟರ್" ಕೋಬಾಲ್ಟ್-೬೦ನ್ನು ರೀಆಕ್ಟರ್‌ಗಳಲ್ಲಿ ತಯಾರಿಸಿ ಅಹಮ್ಮದಾಬಾದಿನ ಸೇಠ್ ವಡಿಲಾಲ್ ಸಾರಾಭಾಯ್ ಜನರಲ್ ಆಸ್ಪತ್ರೆಗೆ ಕ್ಯಾನ್ಸರ್ ಚಿಕಿತ್ಸೆಗಾಗಿ ಕಳುಹಿಸಿದೆ. ಇದರಿಂದ ಪ್ರತಿದಿನವೂ ೧೫೦ ಕ್ಯಾನ್ಸರ್ ರೋಗಿಗಳಿಗೆ ಚಿಕಿತ್ಸೆ ಮಾಡಲು ಸಾಧ್ಯವಾಗಿದೆ. ಇದರಿಂದ ಪ್ರತಿವರ್ಷವೂ ಒಂದು ಲಕ್ಷ ರೂಪಾಯಿ ವಿನಿಮಯ ಉಳಿತಾಯವಾಗಿದೆ. ಇಂಡಿಯಾದಲ್ಲಿ ೩೦ ಆಸ್ಪತ್ರೆಗಳಲ್ಲಿ ಕೋಬಾಲ್-೬೦ ರಿಂದ ಚಿಕಿತ್ಸೆ ನಡೆಯುತ್ತದೆ. ಅವೆಲ್ಲಾ ವಿದೇಶದಿಂದ ಬಂದವು "ಬಾಬಾ ಅಟಾಮಿಕ್ ರಿಸರ್ಚ್ ಕ್ಷೇತ್ರವು" ಕ್ರಮೇಣ ಅವುಗಳಿಗೆಲ್ಲಾ ಕೋಬಾಲ್ಟ್-೬೦ ನ್ನು ಕಳುಹಿಸುವುದು.

ಕೃಷಿ ಪ್ರಯೋಗ:

ರೇಡಿಯೋ ಐಸೋಟೋಪ್‌ಗಳು ಬೆಳೆಗಳನ್ನೂ ಪ್ರಾಣಿಗಳ ಆರೋಗ್ಯವನ್ನೂ ಹೆಚ್ಚಿಸಿವೆ. ಮಣ್ಣಿನೊಳಗೆ ಇಳಿದು ಹೋಗಿ, ಗಿಡಗಳ ಬೇರುಗಳಿಂದ ಹೀರಲ್ಪಡುತ್ತವೆ. ಅವುಗಳು ಸಸ್ಯಗಳು ಎಷ್ಟು ಗೊಬ್ಬರವನ್ನು ಹೀರಿಕೊಳುತ್ತವೆಂದೂ ಯಾವ ಬೆಳೆಗೆ ಮತ್ತು ಯಾವ ಭೂಮಿಗೆ ಯಾವ ಬಗೆ ಗೊಬ್ಬರ ಬೇಕೆಂದೂ ತಿಳಿಸುತ್ತವೆ. ಕಳೆಗಳನ್ನೂ, ಕ್ರಿಮಿಗಳನ್ನೂ ಕೊಂದು, ಪ್ರಯೋಜನಕಾರಿ ಗಿಡಗಳನ್ನು ಮಾತ್ರ ಉಳಿಸುವ ರಸಾಯನಿಕ ವಸ್ತುಗಳನ್ನು ಕಂಡು ಹಿಡಿಯಲು ಅವುಗಳ ಸಹಾಯದಿಂದ ಸಾಧ್ಯವಾಗಿದೆ. ಅವುಗಳನ್ನು ಕೋಳಿಗಳಿಗೆ ತಿನ್ನಿಸಿದರೆ ಆಹಾರವು ಯಾವ ರೀತಿಯಲ್ಲಿ ಮೊಟ್ಟೆಯಾಗುತ್ತದೆಂಬುದು ತಿಳಿಯುತ್ತದೆ. ದನಗಳ ಆಹಾರದಲ್ಲಿ ಯಾವ ಧಾತುಗಳು ಬೇಕೆಂಬುದು ಗೊತ್ತಾಗುತ್ತದೆ. ಗ್ಯಾಮಾ ಕಿರಣಗಳಿಂದ ರೋಗಾಣುಗಳನ್ನು ನಾಶಮಾಡಿ ಆಹಾರ ವಸ್ತುಗಳನ್ನು ಸ್ವಚ್ಛ ಮಾಡಿ, ಜೋಪಾನವಾಗಿಡುವ ಕ್ರಮ ಬಂದಿದೆ. ಶಸ್ತ್ರಚಿಕಿತ್ಸೆಯಲ್ಲಿ ಹೊಲಿಯುವ ದಾರ, ಪಿಚಕಾರಿ, ಶಸ್ತ್ರಗಳು, ಕೆಲವು ಔಷಧಗಳು ಶುದ್ಧಿಯಾಗಲು ಬಿಸಿಯನ್ನು ತಡೆಯುವುದಿಲ್ಲ. ಗ್ಯಾಮಾಕಿರಣಗಳು ಅವುಗಳನ್ನು ಶುಚಿಮಾಡುತ್ತವೆ. ರೇಡಿಯೋ ಕಿರಣಗಳಿಂದ ಬತ್ತದ ಬೆಳೆ ವೃದ್ಧಿಸಿದೆ. ಅಕ್ಕಿಯ ಲಕ್ಷಣ ಉತ್ತಮವಾಗಿದೆ. ಕಡಲೇ ಕಾಯಿ ಪೈರು, ಹುಲುಸಾಗಿ ಬೀಜಗಳು ದೊಡ್ಡದಾಗಿವೆ. ಮಾವಿನಹಣ್ಣು, ಸೇಬು, ಸೀಬೆ ಹಣ್ಣು ಬಾಳೆಹಣ್ಣು ಮೊದಲಾದ ಹಣ್ಣುಗಳು ಗ್ಯಾಮಾ ಕಿರಣಗಳ ಪ್ರಯೋಗದಿಂದ ಹೆಚ್ಚು ಕಾಲ ಬಾಳುತ್ತವೆ.

ಕೈಗಾರಿಕೆಗಳಲ್ಲಿ :

ಕಾಗದ, ಲೋಹ, ನೆಯ್ದ ವಸ್ತ್ರ, ರಬ್ಬರ್, ಪ್ಲಾಸ್ಟಿಕ್, ಗಾಜು, ತಾಮ್ರ, ಅಲ್ಯುಮಿನಿಯಂ, ಟಿನ್ ಪ್ಲೇಟ್‌ಗಳ ಕೈಗಾರಿಕೆಗಳಲ್ಲಿ ಐಸೋಟೋಪ್ ಕಿರಣಗಳ ಅಳತೆ ಮಾನಗಳು ಷೀಟ್‌ಗಳ ದಪ್ಪ ಒಂದೇ ಸಮನಾಗಿರುವಂತೆ ನಿಗ್ರಹಿಸುತ್ತದೆ. ಕಾರ್ಬನ್ ಕಾಗದ, ವ್ಯಾಕ್ಸ್ ಕಾಗದ, ಸುತ್ತುವ ಕಾಗದಗಳ ದಪ್ಪವನ್ನೂ ಸಿಗರೇಟುಗಳಲ್ಲಿಡುವ ತಂಬಾಕಿನ ಸಾಂದ್ರತೆಯನ್ನೂ ಅಂಕೆಯಲ್ಲಿರುಸುತ್ತವೆ. ಪೆಟ್ರೋಲಿಯಂ ಕೈಗಾರಿಕೆಯಲ್ಲಿ ನಳಿಗೆಗಳಲ್ಲಿ ಹರಿಯುವ ಬೇರೆ ಬೇರೆ ಎಣ್ಣೆಗಳು ಯಾವುವೆಂದು ಐಸೋಟೋಪ್‌ಗಳು ತಿಳಿಸುತ್ತವೆ. ಇರಿಡಿಯಂ ಅಥವಾ ಕೋಬಾಲ್ಟ್ ಐಸೋಟ್ರೋಪ್‌ನ ಪ್ರಬಲವಾದ ಗ್ಯಾಮಾ ಕಿರಣಗಳು ಘನ ವಸ್ತುಗಳೊಳಗೆ ತೂರಿ ಹೋಗಿ ಲೋಹಗಳ ಎರಕಗಳಲ್ಲೂ, ನಳಿಗೆಗಳ ವೆಲ್ಡ್‌ಗಳಲ್ಲೂ ದೋಷವಿದ್ದರೇ, ರೇಡಿಯೋ ಗ್ರಾಫ್ ಕ್ಯಾಮರಾದ ಫಿಲ್ಮ್ ಮೇಲೆ ಬೀಳುವ ಫೋಟೋಗಳ ಮೇಲೆ ಗ್ಯಾಮಾ ಕಿರಣಗಳು ದೋಷವನ್ನು ಸ್ಪಷ್ಟಪಡಿಸುತ್ತವೆ ಟ್ಯಾಂಕ್ ಕಾರ್ಖಾನೆ, ಫರ್ಟಿಲೈಜರ್ ಕಾರ್ಖಾನೆ, ಎಣ್ಣೆ ಶುದ್ಧಿಯ ಕಾರ್ಖಾನೆಗಳಿಗೆ ಐಸೋಟೋಪ್ ರೇಡಿಯಾಗ್ರಫಿ ಅಗತ್ಯ. ಐಸೋಟೋಪ್‌ಗಳು ಎಂಜಿನ್ ಎಷ್ಟು ಸವೆದಿದೆಯೆಂದೂ, ಲೋಹಗಳು ಹೇಗೆ ತುಕ್ಕಾಗುವುವೆಂದೂ ತಿಳಿಸುತ್ತವೆ. ಭೂಗರ್ಭದಲ್ಲಿನ ನೀರಿನ ನಳಿಗೆಗಳ ಸೋರಿಕೆಯನ್ನು ಪತ್ತೆಮಾಡುತ್ತವೆ. ಬೇರಿಂಗ್, ಗಿಯರ್, ಚಕ್ರ, ಆಯುಧಗಳು ಸವೆದಿರುವುದನ್ನು ಪರೀಕ್ಷಿಸುತ್ತವೆ. ವಸ್ತ್ರಗಳನ್ನು ಪ್ರಿಂಟ್ ಮಾಡುವಾಗ ಶಾಯಿ ಹರಿಯುವುದನ್ನು ನಿಯಂತ್ರಿಸುತ್ತವೆ. ಉಕ್ಕಿನ ಮಿಲ್‌ಗಳಲ್ಲಿ ಮೋಟಾರ್ ಕಾರುಗಳಿಗೆ ಬೇಕಾಗುವ ಉಕ್ಕಿನ ಒಂದೇ ಸಮನಾದ ದಪ್ಪವಿದೆಯೋ ಎಂದು ತಿಳಿಸುತ್ತವೆ.

ಟ್ರೋಂಬೆಯ "ರೇಡಿಯೋ ಟ್ರೇಸರ್" ಕಲೆಯನ್ನು ಹೈಡ್ರಾಲಜಿ ಎಂಬ ಜಲ ವಿಜ್ಞಾನಕ್ಕೆ ಪ್ರಯೋಗಿಸಿ ನದಿ ಮತ್ತು ಸಮುದ್ರ ಪಾತ್ರಗಳ ಮೇಲಿರುವ ಸೂಸು ಮಣ್ಣಿನ (Silt) ಸಂಚಲೆಯನ್ನೂ, ನದಿಯ ನೀರೋಟವನ್ನೂ ಅಳೆದಿದ್ದಾರೆ. ನಾನಾ ರೇವುಗಳ ಸೂಸು ಮಣ್ಣಿನ ಚಳವಳವನ್ನು ಸಂಶೋಧಿಸಿದ್ದಾರೆ. ಪರಮಾಣುಗಳಿಂದ ಪ್ರಸಾರವಾಗುವ ಅಪಾಯಕಾರಿ ಕಿರಣಗಳು ಮಾನವನ ಇಂದ್ರಿಯಗಳಿಗೆ ಗೋಚರವಾಗುವುದಿಲ್ಲ. ಅವುಗಳನ್ನು ಪತ್ತೆ ಮಾಡಲು ಟ್ರೋಂಬೆಯಲ್ಲಿ ಎಲೆಕ್ಟ್ರಾನಿಕ್ ಉಪಕರಣಗಳು ನಿರ್ಮಿತವಾಗಿವೆ; ಇದರಿಂದ ಕೋಟ್ಯಾಂತರ ರೂಪಾಯಿಗಳ ವಿದೇಶಿ ವಿನಿಮಯ ದೊರಕಿದೆ. ಎಲೆಕ್ಟ್ರಾನಿಕ್ ಉಪಕರಣಗಳೂ, ಇತರ ಸಾಧನಗಳು ಭಾರತದಲ್ಲಿ ತಯಾರಾಗುತ್ತಿವೆ. ಇತರ ದೇಶಗಳಲ್ಲಿ ಸ್ಫೋಟಿಸಿದ ಆಟಂಬಾಂಬುಗಳಿಂದ ಉತ್ಪತ್ತಿಯಾದ ಅಪಾಯಕಾರಿ ವಸ್ತುಗಳನ್ನು ಅಂದಾಜು ಮಾಡಲು ಹತ್ತು ಅವಲೋಕನ ಸ್ಥಾನಗಳು ಸ್ಥಾಪಿತವಾಗಿವೆ ವಾಯುವಿನ ದೂಳು, ಸಸ್ಯಗಳು, ಮಳೆನೀರು, ಮಣ್ಣು, ಹುಲ್ಲು, ಮನುಷ್ಯನ ಎಲಬುಗಳಲ್ಲಿರುವ ವಿದ್ಯುತ್

(15 ನೇ ಪುಟ ನೋಡಿ)

ಅಮೇರಿಕಾದಲ್ಲಿ ಬಸವ ತತ್ವ ಪ್ರಚಾರ

ಇಂಗ್ಲೀಷಿನಲ್ಲಿ : ಡಾ|| ಕೆ. ವಿ. ಸೋಮಶೇಖರ್ ಅನುವಾದ ಕನ್ನಡಕ್ಕೆ : ಕೆ. ವಿ. ಜಗದೀಶಯ್ಯ

ಅಣ್ಣ ಬಸವಣ್ಣನವರ 8 ನೆಯ ಶತಮಾನೋತ್ಸವ ಸಂದರ್ಭದಲ್ಲಿ, ಹೊರನಾಡಿನಲ್ಲಿ ಬಸವಣ್ಣ ಮತ್ತು ಅಲ್ಲಮ ಪ್ರಭು ಮೊದಲಾದವರ ತತ್ವದ ಬಗ್ಗೆ, ಉಪನ್ಯಾಸಗಳ ಮೂಲಕ ಪ್ರಚಾರ ಕಾರ್ಯವನ್ನು ಕೈಗೊಂಡು ಅದರ ಯಶಸ್ಸಿನ ಬಗ್ಗೆ ಲೇಖಕರು ವಿವರಿಸಿದ್ದಾರೆ. ಅದನ್ನು ಬಸವ ಜಯಂತ್ಯುತ್ಸವದ ಸಂದರ್ಭದಲ್ಲಿ ನೆನಪಿಗೆ ತಂದಿದ್ದಾರೆ. —ಸಂ.

ಶ್ರೀ ಬಸವೇಶ್ವರರ ಎಂಟನೆಯ ಶತಮಾನೋತ್ಸವ ಸಂದರ್ಭದಲ್ಲಿ ನಾನು ಅಮೇರಿಕಾದ ಇಲಿನಾಯ್ಸ್ ಸಂಸ್ಥಾನದ, ಕಾರ್ಬಾಂಡೇಲ್ ಪಟ್ಟಣದಲ್ಲಿರುವ "ಭಾರತಸಂಘದ" ಅಧ್ಯಕ್ಷನಾಗಿಯೂ, ಮತ್ತು ದಕ್ಷಿಣ ಇಲಿನಾಯ್ಸ್ ವಿಶ್ವವಿದ್ಯಾಲಯದ (Southern Illinois University) "ಅಂತರಾಷ್ಟ್ರೀಯ ವಿದ್ಯಾರ್ಥಿಸಂಘದ" ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಿದ್ದೆನು. ಈ ಸದವಕಾಶವನ್ನೂ ಉಪಯೋಗಿಸಿಕೊಂಡು ಈ ಎರಡು ಸಂಘಗಳ ಕಾರ್ಯಕಾರಿ ಸಮಿತಿಗಳ ಸಂಯುಕ್ತಾಧಿವೇಶನವನ್ನು ಕರೆದು ಬಸವಣ್ಣನವರ ಉಪದೇಶಗಳನ್ನು ಪರದೇಶಿಯರಿಗೆ ಪರಿಚಯ ಮಾಡಿಕೊಡ ಬೇಕೆಂಬ ವಿಷಯದ ಬಗ್ಗೆ ಚರ್ಚಿಸಿದೆವು. ಈ ಸಂಘಗಳಲ್ಲಿ ಭಾರತದ ಇತರ ಸಂಸ್ಥಾನಗಳ ಸದಸ್ಯರೇ ಅಲ್ಲದೆ ಅಮೇರಿಕಾ, ಜಪಾನ್, ಫ್ರಾನ್ಸ್, ಚೈನಾ (ಥೈವಾನ್) ಇಂಡೋನೇಶಿಯಾ ಮುಂತಾದ ರಾಷ್ಟ್ರಗಳ ಸದಸ್ಯರೂ ಇದ್ದರು. ಇವರ ಮನಸ್ಸಿನ ಮೇಲೆ ಬಸವೇಶ್ವರರ ವಿಚಾರ ಪರಿಣಾಮಕಾರಿಯಾಗಿ ಮಾಡಲು ಸ್ವಲ್ಪ ಶ್ರಮ ಪಡಲೇ ಬೇಕಾಯಿತು. ಚರ್ಚೆಯ ನಂತರ ಸದಸ್ಯರ ಒಮ್ಮತಾಭಿಪ್ರಾಯದಂತೆ ಈ ಸಂಘಗಳ ಸಂಯುಕ್ತಾಶ್ರಯದಲ್ಲಿ ಮೂರು ಮೂರು ಉಪನ್ಯಾಸಗಳನ್ನು ಏರ್ಪಡಿಸುವಂತೆ ತೀರ್ಮಾನವಾಯಿತು.

ಈ ಮೂರು ಉಪನ್ಯಾಸಗಳಲ್ಲಿ ಬಸಣ್ಣನವರು ಉಪದೇಶಿಸಿದ "ಕಾಯಕವೇ ಕೈಲಾಸ" ಎಂಬ ವಿಚಾರವಾಗಿಯೂ, ನನ್ನ ಸಹೋದರರಾದ ಡಾ|| ಕೆ. ವಿ. ಚಂದ್ರಶೇಖರ್‌ರವರು (Professor of Edcaton Fort valley state College, Georgia, U.S.A.) (ಇವರು ಸಿದ್ಧಗಂಗಾ ಗುರುಕುಲದ ಹಳೆಯ ವಿದ್ಯಾರ್ಥಿ) "ಹರಿಜನೋದ್ಧಾರ" ದ ವಿಚಾರವಾಗಿಯೂ ಮತ್ತು ತಮ್ಮನಾದ ಶ್ರೀ ಕೆ. ವಿ ರೇವಣ್ಣಸಿದ್ದಪ್ಪನು (Hydroculture specialist, Georgia Hydroculture, mc, Georgia, U.S.A.) ಬಸವೇಶ್ವರರ ಸಮಕಾಲೀನರಾದ ಅಕ್ಕಮಹಾದೇವಿ, ಅಲ್ಲಮಪ್ರಭು, ಹರಳಯ್ಯ ಇತರರ ವಿಚಾರವಾಗಿ ಮಾತನಾಡಿದರು ಅಂದಿನ ಸಭೆಯು ಈ ಉಪನ್ಯಾಸಗಳನ್ನು ಬಹಳ ಉತ್ಸುಕತೆಯಿಂದ ಕೇಳಿತು. ಈ ಉಪನ್ಯಾಸಗಳ ಕೊನೆಯಲ್ಲಿ ನಾವು ಮಾತನಾಡಿದ ವಿಚಾರದಮೇಲೆ ಚರ್ಚೆ ನಡೆಯಿತು. ಚರ್ಚೆಯಲ್ಲಿ ಇತರ ಸಂಸ್ಥಾನಗಳವರೇ ಅಲ್ಲದೆ ಒಬ್ಬ ಅಮೇರಿಕಾದವರು ಮತ್ತು ಒಬ್ಬ ಫ್ರೆಂಚ್ (French) ವಿದ್ಯಾರ್ಥಿಯೂ ಭಾಗವಹಿಸಿದ್ದರು. ಸಭೆಯ ಒಟ್ಟಾರೆ ಅಭಿಪ್ರಾಯವೆಂದರೆ ಈ ಜಗಜ್ಯೋತಿಯು ಎಂಟುನೂರು ವರುಷಗಳ ಹಿಂದೆ ಬದುಕಿ ತನ್ನ ಉಪದೇಶಗಳನ್ನು ವಚನಗಳೋಪಾದಿಯಲ್ಲಿ ಜನತೆಗೆ ಅರ್ಪಿಸಿದ್ದರೂ, ಅದು ಇಂದಿಗೂ ಜೀವಂತ ಸತ್ಯವಾಗಿದೆಯಲ್ಲ ಎಂಬ ವಿಚಾರ. ಅಲ್ಲದೆ ಪಾಶ್ಚಾತ್ಯ ಸಂಸ್ಕೃತಿಯಲ್ಲಿ "ಕಾಯಕವೇ ಕೈಲಾಸ" (Work is worship) ಎಂಬುದನ್ನು ಈ ಪೂಜ್ಯನು ಎಂಟುನೂರು ವರ್ಷಗಳ ಮೊದಲೇ

ಬೋಧಿಸಿರುವನಲ್ಲಾ ಎಂಬ ವಿಚಾರ. ಇನ್ನೊಂದು ವಿಚಾರವೆಂದರೆ ಮೇಲು ಕುಲದವರೆಂದು ಹೇಳಿಕೊಳ್ಳುವವರು ಕೀಳು ಕುಲದವರೆಂಬುವವರನ್ನು ತುಳಿದು ಮೇಲಕ್ಕೆ ಏಳದಂತೆ ಮಾಡಿರುವುದು. ಈ ಚರ್ಚೆಯಲ್ಲಿ ನಾನು ಬ್ರಾಹ್ಮಣನಾದ (ಮೇಲುಕುಲದ) ಮಧುವರಸನ ಲಾವಣ್ಯವತಿಯನ್ನು ಕೀಳು ಕುಲದವನಾದ ಹರಳಯ್ಯನ ಮಗನಾದ ಶೀಲವಂತನಿಗೆ ಕೊಟ್ಟು ವಿವಾಹ ಮಾಡಿಸಿದ ವಿಚಾರವನ್ನು ವಿಮರ್ಶಿಸಿದೆನು. ಈ ಉನ್ನತ ಮಟ್ಟದ ವಿಚಾರಗಳು ಸಭಿಕರ ಮನಸ್ಸಿನ ಮೇಲೆ ಒಳ್ಳೆಯ ಪರಿಣಾಮಗಳನ್ನು ಬೀರಿದುದಲ್ಲದೆ ಬಸವಣ್ಣನ ವಿಚಾರದಲ್ಲಿ ಸದಭಿಪ್ರಾಯ ಹೊಂದುವಂತೆ ಮಾಡಿದವು. ನಾವು ಈ ಸಮಯದಲ್ಲಿ ಬಸವೇಶ್ವರರ, ಅಕ್ಕಮಹಾದೇವಿ ಪ್ರಭುದೇವರ ಕೆಲವು ವಚನಗಳನ್ನು ಇಂಗ್ಲಿಷಿಗೆ ಭಾಷಾಂತರಿಸಿ ಹೇಳಿದೆವು.

ಸಭಿಕರಲ್ಲಿ ಬಂದ ಒಂದೇ ಒಂದು ಸಂಶಯವೇನೆಂದರೆ ಈ ಸಮಾಜ ಸುಧಾರಕನ ಉಪದೇಶಗಳು ಶ್ರೇಷ್ಠಮಟ್ಟದ್ದು, ಮತ್ತು ವಿಶ್ವಕ್ಕೆ ಅನ್ವಯವಾದರೂ ಏತಕ್ಕೆ ವಿಶ್ವವಿಖ್ಯಾತವಾಗಿರಲಿಲ್ಲ ಎಂದು. ಇದಕ್ಕೆ ಕಾರಣ ಈ ತತ್ವಗಳು ಭಾರತದ ಇತರ ಭಾಷೆಗಳಲ್ಲಿ ಮತ್ತು ಪರದೇಶೀಯ ಭಾಷೆಗಳಲ್ಲಿ ತರ್ಜುಮೆಯಾಗದಿರುವುದೇ. ಸಭಿಕರಲ್ಲಿ ಬಂದ ಮತ್ತೊಂದು ಸಂಶಯವೆಂದರೆ ಈ ಸಮಾಜ ಸುಧಾರಕನು ಮತ್ತು ವಿಶ್ವಪ್ರೇಮಿಯು ಭಾರತದ ನೆಲದಲ್ಲಿ ಹುಟ್ಟಿದ್ದರೂ. ಭಾರತದ ಜನತೆ ಏತಕ್ಕೆ ಈತನ ಉಪದೇಶಗಳನ್ನು ಪಾಲಿಸುತ್ತಿಲ್ಲ! ಇದಕ್ಕೆ ಕಾರಣ ಇವರ ತತ್ವಗಳು ಭಾರತದ ಇತರೆಡೆಗಳಲ್ಲಿ ಪ್ರಚಾರವಾಗದೆ ಇರುವುದು.

ಆದ್ದರಿಂದ ಈ ಜಗಜ್ಯೋತಿಯ ಅನುಯಾಯಿಗಳಾದ ನಾವು ಮಾಡಲೇ ಬೇಕಾದ ಕರ್ತವ್ಯವೇನೆಂದರೆ ಅವರ ತತ್ವಗಳು ಭಾರತದ ಇತರ ಸಂಸ್ಥಾನಗಳಲ್ಲಿ ಅಲ್ಲದೆ ವಿಶ್ವದ ಬೇರೆ ದೇಶಗಳಲ್ಲಿ ಪ್ರಚಾರವಾಗುವಂತೆ ವಚನ ರೂಪದಲ್ಲಿರುವ ಉಪದೇಶಗಳನ್ನು ಆಯಾ ಭಾಷೆಗಳಿಗೆ ಭಾಷಾಂತರಿಸಿ ಹಂಚುವ ಏರ್ಪಾಡು ಮಾಡಬೇಕು. ಇದು ಬಹಳ ದೊಡ್ಡ ಕೆಲಸ ಆದರೆ ಇರುವೆಯು ಸಣ್ಣ ಪ್ರಾಣಿಯಾದರೂ ತನ್ನ ಜೊತೆಯವರೊಂದಿಗೆ ಆನೆಯಂತ ದೊಡ್ಡ ಪ್ರಾಣಿಯನ್ನು ಎಳೆಯುವಂತೆ ಬಸವಣ್ಣನ ಅನುಯಾಯಿಗಳಾದ ನಾವೆಲ್ಲರೂ ಕಾಯೇನ ವಾಚಾ ಮನಸಾ ದುಡಿದರೆ ಯಾವುದೂ ಅಸಾಧ್ಯವಲ್ಲ. ಮಹಾನುಭಾವ ಚನ್ನಬಸವಣ್ಣನವರು ಹೇಳಿರುವಂತೆ;

> "ಬಸವ ಎಂಬ ಮೂರಕ್ಷರ ಹೃದಯ ಕಮಲದಲ್ಲಿ ನೆಲೆಗೊಂಡರೆ
> ಅಭೇದ್ಯ ಭೇದ್ಯವಾಯಿತು; ಅಸಾಧ್ಯ ಸಾಧ್ಯವಾಯಿತು
> ಇಂತು ಬಸವಣ್ಣನಿಂದ ಲೋಕ ಲೌಕಿಕದ ಶುಭಾಷೆಯ ಕಳೆದು,
> ಲೋಕಾಚಾರಣೆಯನತಿಗಳೆದು ಭಕ್ತಿ ಭರವಪ್ಪುದು
> ಕೂಡಲ ಸಂಗಯ್ಯನಲ್ಲಿ ಬಸವಣ್ಣನ ಕಾರುಣ್ಯದಿಂದ.

ಯಾವುದೂ ಅಸಾಧ್ಯವಾದ ಕೆಲಸವಲ್ಲ. ಆದ್ದರಿಂದ ಆಯಾ ದೇಶಗಳ ದೊಡ್ಡ ಪಟ್ಟಣಗಳಲ್ಲಿ ಬಸವಣ್ಣನ ತತ್ವ ಪ್ರಚಾರ ಸಮಿತಿಗಳನ್ನು ರಚಿಸಬೇಕು. ಈ ಸಮಿತಿಗಳಿಗೆ ಬೇಕಾದ ಗ್ರಂಥ ಸಂಪತ್ತನ್ನು "ಬಸವ ಸಮಿತಿ"ಯಂತಹ ಉನ್ನತ ಮಟ್ಟದ ಸಂಸ್ಥೆಯಿಂದ ಒದಗಿಸುವ ಏರ್ಪಾಡು ಮಾಡಬೇಕು. ಇದಕ್ಕೆ ಮೊದಲ ಹೆಜ್ಜೆಯಾದ ಅಮೇರಿಕಾ ಸಂಯುಕ್ತ ಸಂಸ್ಥಾನದ ನ್ಯೂಯಾರ್ಕ ನಗರದಲ್ಲಿ ಈಗ್ಗೆ ಕೆಲವು ತಿಂಗಳ ಹಿಂದೆ ಬಸವ ಸಮಿತಿಯ ಉದ್ಘಾಟನೆ ನಡೆಯಿತು ಇದೇ ರೀತಿ ಬೇರೆ ಸಂಸ್ಥಾನಗಳ ಮತ್ತು ದೇಶಗಳ ದೊಡ್ಡ ನಗರಗಳಲ್ಲಿ ಸಮಿತಿಗಳನ್ನು ರಚಿಸಿ ಈ ಜಗಜ್ಯೋತಿಯ, ಸಮಾಜೋದ್ಧಾರಕನ, ರಾಜಕೀಯ ಮುತ್ಸದ್ಧಿ, ಶ್ರೇಷ್ಠ ಮನುಜನ ಉಪದೇಶಗಳನ್ನು ಪ್ರಚಾರ ಮಾಡಲು ಇನ್ನಾದರೂ ಮುಂದಾಗಿ ವಿಶ್ವಶಾಂತಿಯ ಹಾದಿಯಲ್ಲಿ ಮುಂದುವರಿಯಲು ಪಣ ತೊಡೋಣ.

(13 ನೇ ಪುಟದಿಂದ)

ವಿಕೀರಣದ ಪರಿಮಾಣವನ್ನು ಅಳೆಯುತ್ತಾರೆ. ಸಮುದ್ರದ ನೀರಿನಿಂದ ಉಪ್ಪನ್ನು ಬೇರ್ಪಡಿಸಿ ಕುಡಿಯುವ ನೀರನ್ನು ತಯಾರಿಸಲಾಗುತ್ತದೆ. ಶ್ರೀ ಶೈಲಂನಲ್ಲಿ ಕೃಷ್ಣಾ ನದಿ ಅಣೆಕಟ್ಟನ್ನು ಆರಂಭಿಸಿದಾಗ ನೀರು ಯಾವುದೋ ಗುಪ್ತ ಮಾರ್ಗದಲ್ಲಿ ಪ್ರವಿಸುತ್ತಾ ಯಾರಿಗೂ ಪತ್ತೆಯಾಗಲಿಲ್ಲ. ಸ್ಟ್ರಾಂಟಿಯಂ ಐಸೋಟ್ರೋಪ್ ಅದನ್ನು ಪತ್ತೆ ಹಿಡಿಯಿತು.

ಚೀನಿಯರ ದಾಳಿಕಾಲದಲ್ಲಿ ಭಾರತದ ಆಸ್ಪತ್ರೆಗಳಲ್ಲಿ ರಕ್ತದ ಪ್ಲಾಸ್ಮಾಕ್ಕೆ ಬಹು ಅಗತ್ಯವಾಯಿತು. ದೇಶದಲ್ಲಿದ್ದ ಎರಡೇ ಯಂತ್ರಗಳು ಈ ಕಾರ್ಯಕ್ಕೆ ಸಾಕಾಗಲಿಲ್ಲ. ಟ್ರೊಂಬೆಯ ಅಣುಶಕ್ತಿ ಸಂಸ್ಥೆಯು ತಿಂಗಳಿಗೆ 180 ಲೀಟರ್ ಪ್ಲಾಸ್ಮಾವನ್ನು ಶೈತ್ಯದಿಂದ ಹೆಪ್ಪುಗಟ್ಟಿಸಿ ಒಣಗುವಂತೆ ಮಾಡಲು ಯಂತ್ರವನ್ನು

(26 ನೇ ಪುಟ ನೋಡಿ)

ಮಗನಿಂದ ತಂದೆಗೆ ಸೋಲು

—ಎನ್. ಎಸ್. ಗದಗಕರ

ಅಮರಶಿಲ್ಪಿ ಜಕ್ಕಣನ ಜೀವನದಲ್ಲಿ ಜುಗುಪ್ಸಿತವಾದ ಘಟನೆಯೊಂದು ನಡೆಯಿತು. ತನ ಜನಿಸಿದ ಮಗುವು ವ್ಯಭಿಚಾರದಿಂದ ಹುಟ್ಟಿದೆಂದು ಜನ್ಮ ಕುಂಡಲಿ ನೋಡಿ ತಿಳಿದು ಗೃಹ ತ್ಯಾಗ ಮಾಡಿ ದೇಶಾಂತರ ಹೊರಟ. ಮನಶ್ಶಾಂತಿಗಾಗಿ ದೇವದೇವಾಲಯಗಳ ನಿರ್ಮಾಣ ಮಾಡಿದ. ರಾಜಮಹಾರಾಜರುಗಳಿಂದ ಅಮರ ಶಿಲ್ಪಿ, ಆಧುನಿಕ ವಿಶ್ವಕರ್ಮ ಮುಂತಾಗಿ ಬಿರುದಾಂಕಿತನಾದ. ಆದರೆ ಕೊನೆಗೆ ತನ್ನ ಮಗನಿಂದಲೇ ಸೋಲನ್ನು ಪಡೆಯ ಬೇಕಾಯಿತು. ಏಕೆ? ಇದನ್ನು ಮಾನ್ಯ ಲೇಖಕರು ಕನ್ನಡಕ್ಕೆ ಸುಂದರವಾಗಿ ಭಾಷಾಂತರಿಸಿ ಇಲ್ಲಿ ಕೊಟ್ಟಿದ್ದಾರೆ. –ಸಂ.

"ಜಕ್ಕಣ, ನೀನು ಇಂದು ತಂದೆಯಾದಿ"
"ಮಗನೊ, ಮಗಳೊ ?"
"ಪುತ್ರ ರತ್ನ"

"ಹಿರಿಯರ ಆಶೀರ್ವಾದದಿಂದ ಫಲಿಸಿದಂತಾಯಿತು. ಪಂಚಾಂಗ ತನ್ನಿರಿ. ಮಗನ ಜಾತಕವನ್ನು ನೋಡಬೇಕು"

ಹೀಗೆಂದು ಸುವಿಖ್ಯಾತ ಅಮರಶಿಲ್ಪಿ ಜಕ್ಕಣಾಚಾರ್ಯನು ಇದೀಗ ಹುಟ್ಟಿದ ತನ್ನ ಮಗುವಿನ ಗ್ರಹಗತಿಯನ್ನು ಸೂಕ್ಷ್ಮವಾಗಿ ನಿರೀಕ್ಷಿಸ ತೊಡಗಿದನು. ಶಿಲ್ಪಕಲೆಯಲ್ಲಿಯಂತೆ ಅವನು ಜ್ಯೋತಿರ್ವಿದ್ಯೆಯಲ್ಲಿ ಪ್ರವೀಣನಿದ್ದನು. ಅಂತೇ ಅವನ ಮಗನ ಜನನ ನಕ್ಷತ್ರ, ರಾಶಿ, ಗ್ರಹವಿಚಾರಾದಿಗಳನ್ನು ಜ್ಯೋತಿರ್ಗಣಿತ ದೃಷ್ಟಿಯಿಂದ ವಿವೇಚಿಸಿ ಶುಭಾಶುಭಗಳನ್ನು ಪರೀಕ್ಷಿಸ ಹತ್ತಿದನು. ಆದರೆ ಪರೀಕ್ಷಿಸುತ್ತಿರುವಾಗಲೇ ವ್ಯಥೆಯಿಂದ ಉದ್ಗಾರ ತೆಗೆದನು—, "ಅಯ್ಯೊ ? ನಾನು ದುರ್ದೈವಿ. ಮಗನು ವ್ಯಭಿಚಾರದಿಂದ ಹುಟ್ಟಿದವನೆಂದು ಹೊರಡುವದಲ್ಲ! ನನ್ನ ದಾಂಪತ್ಯ ಜೀವನಕ್ಕೆ ದಿಕ್ಕಾರ. ಹೆಂಡತಿ, ಪುತ್ರ ಇವರಿಗೂ ಧಿಕ್ಕಾರ ನನ್ನ ಮನೆಯಲ್ಲಿ ವ್ಯಭಿಚಾರ ನಡೆಯಿತ್ತೆಂದರೇನು ? ಅನ್ಯಾಯ, ಪರಮಾನ್ಯಾಯ! ಇನ್ನು ನಾನು ವೇಶ್ಯೆಯೊಡನೆ ಸಂಸಾರ ಹೂಡಬೇಕೆ? ಇಂತು ಮಗುವಿನ ಜನನ ಲಗ್ನ ಕುಂಡಲವನ್ನು ಹರಿದು ಚೆಲ್ಲಿ ಜಕ್ಕಣಾಚಾರ್ಯನು ದೇಶಾಂತರ ಹೊರಟನು.

ಕಲಿಯುಗದ ವಿಶ್ವಕರ್ಮನೆಂದು ಹೆಸರಾಂತ ಜಕ್ಕಣ್ಣನು ಜೀವನದಲ್ಲಿ ಜಿಗುಪ್ಸೆಗೊಂಡನು. ಉಳಿದ ಆಯುಷ್ಯವನ್ನು ಈಶ ಚಿಂತನೆಯಲ್ಲಿ ತನ್ನ ಅಭಿರುಚಿಯ ಸಂವರ್ಧನೆಯಲ್ಲಿ ಕಳೆಯುವೆನೆಂದು ಸಂಕಲ್ಪಿಸಿದನು. ದೇವದತ್ತವಾದ ಶಿಲ್ಪ ವಿದ್ಯೆಯನ್ನು ದೇವಾಲಯ ನಿರ್ಮಿತಿಯಲ್ಲಿಯೇ ತೊಡಗಿಸಬೇಕೆಂದು ನಿರ್ಣಯಿಸಿದನು. ಇದರಿಂದ ದೇವರು ಒಲಿಯುವನೆಂದು ಪರಿಗ್ರಹಿಸಿದನು. ಅಂದಿನಿಂದಲೇ ಮಹಾ ಮಹಾ ದೇವಾಯತನ ಕಟ್ಟುವಲ್ಲಿ ಮನಸ್ಸುಮಾಡಿದನು. ಅದರಿಂದ ಅವನಿಗೆ ಮನಃಶಾಂತಿ ದೊರೆಕಿತು. ಕ್ಷಿಪ್ರದಲ್ಲಿಯೇ ಅವನ ಶಿಲ್ಪಕಲಾ ಪ್ರೌಢಿಮೆ ದಿಕ್ಕು ದಿಕ್ಕುಗಳಿಗೆ ಮುಟ್ಟಿತು. ದೇಶವಿದೇಶಗಳಿಂದ ರಾಜಮಹಾರಾಜರು ಅವನಿಗೆ ಆಹ್ವಾನವಿತ್ತರು. ದಿವ್ಯಭವ್ಯ ದೇವಮಂದಿರಗಳನ್ನು ಅವನ ಕೈಯಿಂದ ಮಾಡಿಸಿದರು. ದೇಶದ ಮೂಲೆಮೂಲೆಗಳಲ್ಲಿಯೂ ಜಕ್ಕಣ್ಣನ ಶಿಲ್ಪ ವಿದ್ಯೆ ಮೆರೆಯ ಹತ್ತಿತು. ಭಿತ್ತಿ, ಪೀಠ, ಮೂರ್ತಿ ಚಿತ್ರಣ, ಶಿಖರ ರಚನೆ, ಒಳಮಾಳಿಗೆ. ಮಂಟಪ, ಗೋಪುರ –ಮುಂತಾದ ದೇವಾಲಯದ ಯಾವ ಅಂಗೋಪಾಂಗ ವಿನ್ಯಾಸದಲ್ಲಿ ಅವನ ಪ್ರತಿಭೆ ಗೋಚರಿಸಿತು ಅವನ್ನೆಲ್ಲ ಕಣ್ಣಾರೆ ಕಂಡ ರಸಿಕರು ಅವನನ್ನು ಮನವಾರೆ ಹೊಗಳಿದರು. ಎಂಥ ರಸಿಕತೆ, ಪಾಂಡಿತ್ಯ, ! ಎಂದು ಬೆರಳು ಕಚ್ಚಿದರು.

ಅವನ ಕೀರ್ತಿಯನ್ನು ಕೇಳಿ ಅನೇಕ ರಾಜರಾಜೇಶ್ವರರು ಜಕ್ಕಣ್ಣನನ್ನು ಗೌರವ ಪೂರ್ವಕವಾಗಿ ಆಹ್ವಾನಿಸಿ ಸತ್ಕಾರಗೈದರು. ದೇವಾಲಯುಗಳೋಪಾದಿ ರಮಣೀಯ ರಾಜಭವನಗಳನ್ನು ನಿರ್ಮಿಸೆಂದು ವಿಜ್ಞಾಪಿಸಿದರು. ಅದಕ್ಕಾಗಿ ಬೇಕಾದಷ್ಟು ಸಂಪತ್ತು ಕೇಳು ಎಂದರು. ಆದರೆ ಜಕ್ಕಣ್ಣನು ವಿನಯಾನ್ವಿತನಾಗಿ ಸ್ಪಷ್ಟವಾಗಿ ನುಡಿದನು—, "ನಾನು ದ್ರವ್ಯ ಲೋಭಿಯಲ್ಲ. ದೇವಾಲಯದ ಹೊರತಾಗಿ ನಾನು ಏನನ್ನೂ ಕಟ್ಟಲಾರೆನು ಸಂಪತ್ತಿನ ಆಸೆ ನನಗೆ ಇನಿತು ಇಲ್ಲ. ಕೇವಲ ಸೇವಾ ಬುದ್ಧಿಯಿಂದ ದೇವಾಲಯ ನಿರ್ಮಾಣ ಕಾರ್ಯ ಕೈಕೊಂಡಿರುವೆನು. ರಾಣಿನಿವಾಸ, ಅಂತಃಪುರ, ಕ್ರೀಡಾಮಂದಿರ, ವಿಹಾರಧಾಮ, ರಾಜಮಹಾರಾಜರ ಪ್ರತಿಮೆಗಳನ್ನು ತಪ್ಪಿ ಕೂಡ ನಿರ್ಮಿಸುವುದಿಲ್ಲ".

ಈ ಗುರಿಬದ್ಧ ಜೀವನದ ಮೂಲಕವಾಗಿ ಅವನ ಹೆಸರು ಎಲ್ಲೆಡೆ ಕೇಳ ಬಂದಿತು. ಕರ್ನಾಟಕ ರಾಜವಂಶಗಳಲ್ಲಿ ಸುವಿಖ್ಯಾತ ಹೊಯ್ಸಳ ವಂಶದಲ್ಲಿ ಉತ್ಪನ್ನನಾದ ಪಂಡಿತ ಪಕ್ಷಪಾತಿ, ರಸಿಕಾಗ್ರಣಿ, ಕಲಾಭಿಜ್ಞನು ಆದ ಶ್ರೀ ವಿಷ್ಣುವರ್ಧನದೊರೆ ಜಕ್ಕಣನ ಅಮರ ಶಿಲ್ಪಿ ಖ್ಯಾತಿಯನ್ನು ಕೇಳಿ ಅವನನ್ನು ತನ್ನ ರಾಜಧಾನಿಗೆ ಕರೆಸಿದನು. ರಾಜ ಗೌರವದಿಂದ ಸತ್ಕರಿಸಿ ಸಾನುನಯವಾಗಿ ಪ್ರಾರ್ಥನೆಗೊಂಡನು—

"ಶಿಲ್ಪಾಚಾರ್ಯನೆ, ನನದೊಂದು ಉತ್ಕಟ ಆಸೆ ಉಂಟು. ನನ್ನ ರಾಜ್ಯದ ಇಪ್ಪತ್ತುನಾಲ್ಕು ನಗರಗಳಲ್ಲಿ ಮೂರ್ತಿಗಳನ್ನು ಪ್ರತಿಷ್ಠಾಪಿಸಬೇಕು. ದೇವಾಲಯ, ಮೂರ್ತಿ ಎರಡೂ ದಿವ್ಯ ಎನಿಸಬೇಕು. ಅಂತೇ ಆಧುನಿಕ ವಿಶ್ವಕರ್ಮನೆಂದು ಹೆಸರಾಂತ ನಿನ್ನನ್ನು ಬರಮಾಡಿಕೊಂಡದ್ದು. ಈ ಕಾರ್ಯಕ್ಕಾಗಿ ಅವಶ್ಯವಿರುವ ಧನವನ್ನು ಕೊಡಲು ಸಿದ್ಧನಿರುವೆ. ಎಷ್ಟು ಕೋಟಿ ಬೇಕು ಹೇಳು"

ಜಕ್ಕಣ : ರಾಜಾ, ನಾನು ನಿನ್ನಿಂದ ಒಂದು ಕಾಸನ್ನು ಆಪೇಕ್ಷಿಸುವುದಿಲ್ಲ. ಶ್ರೀ ವಿಷ್ಣು ಪ್ರೇರಣೆಯಿಂದ, ಅವನ ಪ್ರೀತ್ಯರ್ಥವಾಗಿ ಸ್ವಸಂತೋಷದಿಂದ ದೇವ ದೇವಾಲಯಗಳ ನಿರ್ಮಾಣ ಮಾಡುವೆನು. ಮೊಟ್ಟ ಮೊದಲಿನ ಕೇಶವ ಮೂರ್ತಿಯನ್ನು ಎಲ್ಲಿ ಮಾಡಬೇಕು ? ಅಜ್ಞಾಪಿಸಿರಿ.

ರಾಜಾ : "ಇಲ್ಲಿಯೇ, ರಾಜಧಾನಿ ಬೇಲೂರಿನಲ್ಲಿ"

ಜಕ್ಕಣ : "ಮಹಾರಾಜರ ಆಜ್ಞೆ ಮಾನ್ಯ"

ಶ್ರೀ ಕೇಶವ ದೇವಸ್ಥಾನದ ನಿರ್ಮಾಣ ಕಾರ್ಯ ಬಹು ರಭಸದಿಂದ ಆರಂಭವಾಯ್ತು. ನೂರಕ್ಕೂ ಮೇಲ್ಪಟ್ಟು ಕುಶಲ ಶಿಲ್ಪಿಗಳು ಆ ಕಾರ್ಯದಲ್ಲಿ ಹಗಲು ರಾತ್ರಿ ತೊಡಗಿ ಮುಗಿಸಿದರು ಸ್ವತಃ ಜಕ್ಕಣನೇ ಅಮೃತ ಶಿಲೆಯಲ್ಲಿ ಶ್ರೀ ಕೇಶವ ಮೂರ್ತಿಯನ್ನು ಕೆತ್ತಿದನು. ಮರುದಿನವೇ ದೇವಪ್ರತಿಷ್ಠಾಪನ ಮಹೋತ್ಸವ. ಅದಕ್ಕಾಗಿ ದೇಶ ವಿದೇಶಗಳಿಂದ ಅನೇಕರು ಆ ಸಮಾರಂಭವನ್ನು ಕಣ್ಣಾರೆ ನೋಡಲು ಬಂದರು. ಬಂದವರೆಲ್ಲರೂ ಸಿದ್ಧವಾಗಿ ನಿಂತ ಪ್ರತಿಮೆಯನ್ನು ಕಂಡು ಹರ್ಷಾವಿಷ್ಟರಾದರು. ಜಕ್ಕಣ, ವಿಷ್ಣುವರ್ಧನ –ಈರ್ವರನ್ನು ಮನವಾರೆ ಅಭಿನಂದಿಸಿದರು.

ಆ ಮಹಾಜನ ಸಮುದಾಯದಲ್ಲಿ ಕೈದಾಳ ಗ್ರಾಮದಿಂದ ಹಲವಾರು ಬಾಲಕರು ಬಂದಿದ್ದರು. ಅವರಲ್ಲಿಯ ಒಬ್ಬನು ದೇವಾಲಯದ ವಿಶಾಲ ಭಿತ್ತಿ, ಕಂಬ, ಗೋಪುರ, ಮೂರ್ತಿಗಳ ಭಾವ ಭಂಗಿಗಳನ್ನು ಸೂಕ್ಷ್ಮವಾಗಿ ನಿರೀಕಿಸುತ್ತಿದ್ದನು. ಹಲವನ್ನು ಮುಟ್ಟಿ ಮುಟ್ಟಿ ಪರಾಮರ್ಶಿಸಿದನು. ಗೆಳೆಯರೆಲ್ಲ ಆಗ ಪರಿಹಾಸಗೈದರು– "ಇವನೊಬ್ಬ ಜಕ್ಕಣನ ಮಗ. ವಿಷ್ಣುವರ್ಧನನಿಂದ ನಿಯೋಜಿತ ಜಕ್ಕಣನ ಕೌಶಲ ಪರೀಕ್ಷೆಗೆಂದು ಇವನನ್ನು ನಿಯಮಿಸಿದ್ದಾರೆ। ಅಂತೇ ಆ ಕಾರ್ಯದಲ್ಲಿ ವಿದ್ಯುಕ್ತನಾಗಿರುವ." ಆದರೆ ಬಾಲಕನಿಗೆ ಈ ಚೇಷ್ಟೆಯೆಡೆಗೆ ಲಕ್ಷ್ಯವಿರಲಿಲ್ಲ. ಸಮಗ್ರ ದೇವಾಲಯದ ಪರಿಶೀಲನೆ ಮುಗಿಸಿ ಮರುದಿನ ಪ್ರತಿಷ್ಠಾಪನೆಗೆಂದು ಗರ್ಭಾಗಾರದಲ್ಲಿಟ್ಟ ಮೂರ್ತಿಯನ್ನು ಅವಲೋಕಿಸ ಹತ್ತಿದನು. ಆ ಮೂರ್ತಿಯ ಸಮುಜ್ವಲ ಮುಖ ಕಾಂತಿ, ಕಣ್ಣಿನ ಚಾಕ ಚಾಕ್ಯತೆ, ಆಕಾರ ಸೌಂದರ್ಯ, ಭಾವ ಕೌಶಲ –ಎಲ್ಲ ನಿರೀಕ್ಷಿಸಿ ಬಾಲಕನು ಕ್ಷಣಕಾಲ ಬೆರಗು ಪಡೆದು ನಿಂತನು. ಅನಂತರ ಮೂರ್ತಿಯ ಅಂಗೋಪಾಂಗ ಪರಿಶೀಲನೆ ನಡೆಸಿದ. ಅಕಸ್ಮಾತ್ತಾಗಿ ಅವನಿಗೆ ಸಂದೇಹ ತಲೆದೋರಿತು. ಕೆಲ ನಿಮಿಷಗಳ ನಂತರ ಶಾಂತ, ಗಂಭೀರ ಮುಖ ಮುದ್ರೆಯಿಂದ ಧೈರ್ಯವಾಗಿ ಉಸುರಿದನು– "ಶುದ್ಧ ಶಿಲೆಯಿಂದ ಈ ಪ್ರತಿಮೆ ಸಿದ್ಧವಾಗಿಲ್ಲ." ಆಗ

ಅಲ್ಲಿದ್ದ, ಜನ ಕೇಳಿತು–"ನೀನೇನು ಜಕ್ಕಣನ ತಾತನೆ? ಅವನು ಶಿಲ್ಪಾಚಾರ್ಯ! ಅಶುದ್ಧ ಶಿಲೆಯಿಂದ ಸುರಮ್ಯ ಮೂರ್ತಿಯನ್ನು ನಿರ್ಮಿಸಲು ನಿನ್ನಂತೆ ಮಂದಮತಿಯೆ?"

ಆಗ ಬಾಲಕನು ಸ್ನಿಗ್ಧ, ಗಂಭೀರ ವಾಣಿಯಲ್ಲಿ ಹೇಳಿದನು– "ಈ ಮೂರ್ತಿಯನ್ನು ಒಡೆದರೆ ನನ್ನ ಮಾತಿನ ಸತ್ಯತೆ ಹೊಳೆದೀತು."

"ಮೂರ್ತಿ ಒಡೆಯುವ ಉಪದೇಶವನ್ನು ಘಜನಿ ಮಹಮದ್ದನಿಂದ ಪಡೆದೆಯೊ ಹೇಗೆ? ಒಡೆದನಂತರ ಶಿಲೆಯು ಶುದ್ಧವಿದೆ ಎಂದು ತಿಳಿದು ಬಂದರೆ?"
"ಆಗ ನನ್ನ ತಲೆ ಕತ್ತರಿಸಿ. ಚೆಲ್ಲಿರಿ"

"ಇಂಥ ಬ್ರಹ್ಮಹತ್ಯದ ಪಾಪ ಯಾರು ಕಟ್ಟಿಕೊಂಡಾರು! ನಿನ್ನ ಶಿರಚ್ಛೇದವೂ ಬೇಡ; ಪ್ರತಿಮೆ ಒಡೆಯುವುದು ಬೇಡ. ಮೂರ್ತಿಯನ್ನು ಒಡೆಯದೆ ಶಿಲೆಯು ಅಶುದ್ಧವಿದೆಯೆಂದು ನಿರ್ಣಯಿಸುವ ವಿಧಾನ ಇದ್ದರೆ ಒಳ್ಳೆಯದು" –ಎಂದು ಜನರು ನುಡಿದರು.

ಆಗ ನಿರುತ್ತರನಾದ ಬಾಲಕನು ಗೆಳೆಯರ ಪರಿಹಾಸದ ಉಕ್ತಿಗಳನ್ನು ಕೇಳುತ್ತ ಮನೆಗೆ ಹೋದನು. ಇಡಿ ಇರುಳೆಲ್ಲ ಚಿಂತೆಯಲ್ಲಿಯೇ ಕಳೆಯಿತು.

ಮರುದಿನ ಪ್ರಾತಃಕಾಲದಲ್ಲಿಯೇ ಮಂಗಲ ವಾದ್ಯಗಳು ನಿನದಿಸತೊಡಗಿದವು. ಅರುಣೋದಯ ಕಾಲಕ್ಕೇ ಲಕ್ಷೋಪಲಕ್ಷ ಜನರು ಕೇಶವ ಮೂರ್ತಿಯ ಪ್ರತಿಷ್ಠಾಪನೋತ್ಸವ ನೋಡಲು ಕೂಡಿದ್ದರು. ಬ್ರಾಹ್ಮಣರು ಉಚ್ಚ ಕಂಠದಲ್ಲಿ ವೇದಘೋಷ ಮಾಡುತ್ತಿದ್ದರು. ದೇವಾಲಯದ ಪ್ರಾಂಗಣದಲ್ಲಿ ನೂರಾರು ಸಾಮಂತ ರಾಜರು, ಸಾವಿರಾರು ಪಂಡಿತ ಮಾರ್ತಾಂಡರು, ಲಕ್ಷಕ್ಕೂ ಹೆಚ್ಚು ಪ್ರೇಕ್ಷಕರು ತಮ್ಮ ತಮ್ಮ ಸ್ಥಳಗಳಲ್ಲಿ ವಿರಾಜಮಾನರಾಗಿದ್ದರು. ಎಲ್ಲರೂ ಮಹಾರಾಜ, ಇಂತಹ ಭವ್ಯ ದಿವ್ಯ ಭವನದ ನಿರ್ಮಾತೃ ಶಿಲ್ಪಸಾರ್ವಭೌಮನ ಮಾರ್ಗ ಕಾಯುತ್ತಿದ್ದರು.

ವಂದಿ ಮಾಗಧರು ಮಹಾರಾಜರ ಆಗಮನವನ್ನು ಬಿರುದು ಬಾವಲಿ ಪ್ರಶಂಸೆಯಿಂದ ಘೋಷಿಸಿದರು.

ಎಲ್ಲರೂ ತಮ್ಮ ಸ್ಥಾನಗಳಲ್ಲಿ ಕೈಕಟ್ಟಿ ನಿಂತಿದ್ದರು. ಮಹಾರಾಜನು ಜಕಣಾಚಾರ್ಯನನ್ನು ಸ್ವತಃ ಕೈ ಹಿಡಿದು ಗೌರವ ಪೂರ್ವಕ ಕರೆತಂದು ಅವನಿಗಾಗಿಯೇ ವಿಶೇಷ ರೀತಿಯಲ್ಲಿ ಅಲಂಕರಿಸಿದ ಸ್ವರ್ಣಾಸನದಲ್ಲಿ ಕುಳ್ಳಿರಿಸಿದನು. ತಾನೂ ಸಿಂಹಾಸನ ಏರಿದನು.

ಪುರೋಹಿತರು ಪ್ರತಿಷ್ಠಾಪನಾ ಮಂತ್ರಗಳನ್ನು ಉಚ್ಚರಿಸಿದರು. ವೇದಘೋಷಗಳಿಂದ ಜಕ್ಕಣಾಚಾರ್ಯನ ಪ್ರಶಂಸೆ ನಡೆದು, ಆಗ ಗಂಭೀರ ಧ್ವನಿ ಸಭಾಂಗಣವನ್ನೆಲ್ಲಾ ವ್ಯಾಪಿಸಿತು. ಜಕ್ಕಣನು ಪ್ರೀತಿ, ಸ್ನಿಗ್ಧ, ಅಭಿಮಾನ ಪೂರ್ಣದೃಷ್ಟಿಯಿಂದ ತಾನು ನಿರ್ಮಿಸಿದ ಮಧುರ, ಮುಗ್ಧ ಕೇಶವ ಮೂರ್ತಿಯನ್ನು ಕ್ಷಣಕಾಲ ನಿರುಕಿಸಿ, ಶ್ರದ್ಧಾಯುಕ್ತ ಜಸ್ತೋಮವನ್ನು ನೋಡಿದನು.

ಅಷ್ಟರಲ್ಲಿ ಒಮ್ಮಿಂದೊಮ್ಮೆಲೆ ಒಂದು ಚೀತ್ಕಾರ ಧ್ವನಿ ಹೊರಹೊಮ್ಮಿತು:

ಈ ಸಮಾರಂಭವನ್ನು ಈಗಲೇ ತಡೆಯಿರಿ. ಕೇಳಿ ಪುರೋಹಿತರು ಸ್ತಬ್ಧರಾದರು. ಮಂಗಲವಾದ್ಯ ನಿಂತವು. ಮಂತ್ರಧ್ವನಿ ಉಡುಗಿತು. ಎಲ್ಲರ ದೃಷ್ಟಿ ಬಾಗಿಲ ಬಳಿ ಹರಿಯಿತು

ಹಿಂದಿನ ದಿನ ಬಂದ ಬಾಲಕನು ನುಡಿದನು. "ಈ ಮೂರ್ತಿ ಅಶುದ್ಧ ಶಿಲೆಯಿಂದ ನಿರ್ಮಿಸಲಾಗಿದೆ."

"ಇದು ಸುಳ್ಳು. ಪರಮ ಶುದ್ಧವಾದ ಅಖಂಡ ಶಿಲೆಯಲ್ಲಿ ಕಡೆದಿರುವೆ ಎಂದು ಜಕ್ಕಣನು ಕ್ರೋಧಾಂಧನಾಗಿ ನುಡಿದನು.

"ಒಂದು ವೇಳೆ ಈ ಕಲ್ಲು ಅಶುದ್ಧವೆಂದು ತಿಳಿದು ಬಂದರೆ ....?" ಎಂದು ಆಕ್ಷೇಪ ಪೂರ್ವಕ, ಧೀರ ಧ್ವನಿಯಿಂದ ಹುಡುಗನು ಕೇಳಿದನು.

"ನನ್ನ ಬಲತೋಳನ್ನೆ ತುಂಡರಿಸಿ ಚೆಲ್ಲುವೆನು"–ಎಂದು ಕೋಪೋದ್ರಿಕ್ತನಾಗಿ, ಸರ್ವಾಂಗಕಂಪಿಸುತ್ತಿರುವಾಗಲೆ ಉಗ್ಗಡಿಸಿದನು–ಜಕ್ಕಣ.

"ಮೂರ್ತಿಯ ನಾಭಿಕಮಲದ ಸುತ್ತಲುಅಶುದ್ಧಿ ಸ್ಫುಟವಾಗಿ ಗೋಚರಿಸುವುದು. ಪರೀಕ್ಷಿಸಿರಿ ಬೇಕಾದರೆ"

(20ನೇ ಪುಟ ನೋಡಿ)

ಕಾಯಕ

ಆನಂದ ಸಾಕು ಬಾಳಲಿ
ಬಾಳ ಬೆಳಕು ತಿಳಿಯಲಿ
ತಿಳಿವು ಅರಿವು ಮೂಡಲಿ
ಕಾರ್ಯಜ್ಞಾನ ನನ್ನಲಿ
ಕಾಯ ಕಲ್ಪ ಆದರಲಿ
ಕಾರ್ಯದೀಕ್ಷೆ ಎನ್ನ ಧ್ಯೇಯ
ತ್ಯಾಗ ಪ್ರೇಮ ಉಳಿಯಲಿ
ಕಾಯ ಕಾರ್ಯ ಕೂಡಲು
ಧ್ಯೇಯ ಧೃತಿಯು ಮೂಡಲು
ದೈವವೆಮ್ಮ ಒಲಿವುದು
ಬಾಳಿ ಬದುಕಿ ನಲಿವೆವು.
ನಮ್ಮ ಶಕ್ತಿ ಕಾಯದಲ್ಲಿ
ನಮ್ಮ ಮುಕ್ತಿ ಕಾರ್ಯದಲ್ಲಿ
ಅಲ್ಲೆ ಭಕ್ತಿ ಅಲ್ಲೆ ಶಕ್ತಿ
ಅದಕೆ ನಾವು ಮೀಸಲು.
ಸತ್ಯಶಕ್ತಿ ನ್ಯಾಯದಲ್ಲಿ
ದೈವಶಕ್ತಿ ಕಾರ್ಯದಲ್ಲಿ
ಯುಕ್ತಿ ಪುರುಷ
ಮುಕ್ತಿನಾಥ ಒಲಿವ ಅಲ್ಲಿ
ಕಾರ್ಯದಲ್ಲಿ ಕಾಲಹರಣ
ಕಾರ್ಯಕ್ಷೇತ್ರ ನಮ್ಮ ಸದನ
ಕಾರ್ಯ ನಿಪುಣನಾದ ಮೇಲೆ
ದೇವನಾಗ ಒಲಿವನು.
ಎನ್ನ ಕಾರ್ಯ ಶುದ್ಧ ಕಾರ್ಯ
ಅವರ ಹಿಂದೆ ಇದ್ದ ನಾತ
ಅದಕೆ ಸ್ಫೂರ್ತಿ ನೀಡುವಾತ
ಅವನು ಒಬ್ಬ ಚೆಲುವನು.
ಕಾರ್ಯ ಚೆಲುವು ಆತನಿಂದ
ಪ್ರೇಮ ಒಲುವು ಆತನಿಂದ
ತ್ಯಾಗಿಯಾಗು ಆತನೆಂದ
ಮುಕ್ತಿಯುಂಟು ಆತನಿಂದ
ಆತನೊಬ್ಬ ನಮ್ಮ ಹಿಂದೆ
ನನ್ನ ನಿನ್ನ ನೋಡುವಾತ
ಆತನಿಂದ ಶಿಕ್ಷೆಯುಂಟು
ಆತನಿಂದ ಮೋಕ್ಷವುಂಟು

—ಎಸ್. ಡಿ. ಗುರುಗೋವಿಂದಯ್ಯ



ಬಸವ

ಆದರ್ಶ ವೈವೆತ್ತ ಹಂಬಲಗಳಾ ಜೀವ
ಭಾವೈಕ್ಯತೆಯ ಬೆಳಕು ಬೀರಿದಿವ ಎಲ್ಲರವ
ವಿಶ್ವಬಂಧು ವಿಚಾರಿ ಜಗಜ್ಯೋತಿ ಎನಿಸಿದವ
ವಚನಸುಧಾ ಚೇತನವ ಹರಿಸಿ
ಜನಕೋಟಿ ಮನಗಳಲಿ ಮಲಗಿದ್ದ ಜಡವ
ತರಿದು ದೂಡಿದ ಚೆಲುವ ಬಸವ;
ಭಾವೈಕ್ಯತೆಯ ಬೆಳಕ ಚೆಲ್ಲಿದಿವ ಎಲ್ಲರವ.
ಕಾಯಕದಿ ಕೈಲಾಸ ಕವಿದು ಕಾಣದಿಹ ಪರಿಚಯ
ಕಾರ್ಯರಂಗದಿ ದುಡಿದು ಪಡೆದು ತೋರಿದ ಕರ್ಮಿ
ನಿರ್ಮಲತೆಯ ನಡೆ ನುಡಿಗಳಲ್ಲಿ ಗುರಿಯ ಗುಡಿಕಟ್ಟಿ,
ಅಲ್ಲಿ........ಮಾನವತೆಯ ಸೊಬಗ ಹೊರ ಸೂಸಿದು
ಆಚಾರದಲ್ಲಿ ಸ್ವರ್ಗವ, ಕಾಣಲು ಮಾರ್ಗ ನಿರ್ಮಿಸಿದ ಧರ್ಮಿ ಬಸವ;
ಆದರ್ಶ ವೈವೆತ್ತ ಹಂಬಲಗಳಾ ಜೀವ
ಭಾವೈಕ್ಯತೆಯ ಬೆಳಕ ಬೀರಿದಿವ ಎಲ್ಲರವ!
ಶರಣ ಬಳಗದ ಹಿರಿಯಮಣಿ
"ಕನ್ನಡದ ಜ್ಯೋತಿ" ತಾ ಬೆಳಗಿದನು ಜಗವ!!
ರಸವೆತ್ತ ಹದಹೃದಯಾ ಶರಣಸಂಘವ ಕಟ್ಟಿ
ಅರಿವಿನಾ ಅನುಭವದ ವಿಚಾರ ಮಥನವ ಮಾಡಿ
ಬಾಳು-ಬದುಕಿನ ಕೃತಿಯೊಳಗುಟ್ಟ ವಚನಗಳಲಿ ರಟ್ಟಾಗಿಸಿ
ಮೇಲು–ಕೀಳ್ಗಳ ಕಿತ್ತು ಸಮಾನ ಬೀಜವ ಬಿತ್ತಿ
ಜೀವನ ಪಥದಲ್ಲಿ ಹೆಜ್ಜೆಹೆಜ್ಜೆಗೂ ಕಂಡುಂಡುದನ್ನು
ವಚನವಲ್ಲರಿಯಲ್ಲಿ ಹರಿಸಿ,
ಕಲ್ಯಾಣದಲಿ ಕ್ರಾಂತಿ ಕಹಳೆಯನು ಮೊಳಗಿಸಿ
ಜನಮನದಿ ಮುದುಡಿದ್ದ ಮಾನವೀಯತೆಯನ್ನು
ತಟ್ಟಿ ಏಳಿಸಿ ಮೊರೆದು ಕರ್ತವ್ಯದೆಡೆ ಬಿಟ್ಟು
ಭಿನ್ನ ಭೇದವ ಸುಟ್ಟ ಬಸವ;
ಭಾವೈಕ್ಯತೆಯ ಬೆಳಕ ಬೀರಿದವ ಎಲ್ಲರವ
ಆದರ್ಶ ವೈವೆತ್ತ ಹಂಬಲಗಳಾ ಜೀವ.

—ದೊಡ್ಡಬಾಣಗೆರೆ ಪ್ರಕಾಶಮೂರ್ತಿ

ಬಸವನೆಂಬೊಕ್ಕಲಿಗ ನಡುಕಟ್ಟನಿಂತ.
ಕೆಲದ ನೆಲದಲ್ಲಿದ್ದ ಕಾಡುಮೇಡನು ಕಡಿದ,
ಸಮತೆಯೆಂಬ ಗಂಡುಗೊಡಲಿಯ ಕೊಂಡು,
ಕಾಯಕದ ಗುದ್ದಲಿ ಪಿಡಿದು ನೆಲವನಗೆದು,
ಹಳೆಗಾಲದ ಭ್ರಾಂತಿಯ ನಾರು ಬೇರುಗಳ ಸೋಸಿದ,
ಕಾಲುವೆಯ ಸರಿಪಡಿಸಿ ತೂಬುಗಳ ನೇರ್ಪಾಗಿಸಿದ.

—ಚನ್ನಪ್ಪ ಎರೇಸೀಮೆ

"ಇದಕ್ಕೆ ಪ್ರಮಾಣವೇನು? ಪರೀಕ್ಷೆ ನಡಿಸುವದೆಂತು?" "ಮೂರ್ತಿಯ ಅಂಗಾಂಗಳೆಲ್ಲಕ್ಕೂ ಗಂಧಲೇಪನ ಮಾಡಿರಿ. ನಾಭಿ ಬಿಟ್ಟು ಉಳಿದೆಡೆಯ ಗಂಧವು ಒಣಗುವುದು. ನಾಭಿಯ ಸುತ್ತಲು ಆರ್ದ್ರತೆ ಚಿರಸ್ಥಾಯಿಯಾಗಿ ಉಳಿಯುವದು." ಹೀಗೆ ಅತ್ಯಧಿಕ ಆತ್ಮ ವಿಶ್ವಾಸದಿಂದ ಬಾಲಕನು ನುಡಿದನು.

ಎದುರಿಗಿದ್ದ ಪುರೋಹಿತರು ಪ್ರತಿಮೆಯಪ್ರತಿ ಅಂಗಕ್ಕೆ ದಿವ್ಯ ಗಂಧಾನುಲೇಪನ ನಡೆಸಿದರು. ಐದಾರು ನಿಮಿಷಗಳಲ್ಲಿ ಅದೆಲ್ಲ ಒಣಗಿ ಹೋಯಿತು. ಆದರೆ ಬಾಲಕನ ಮಾತಿನ ಮೇರೆಗೆ ನಾಭಿಯ ಸುತ್ತಲಿನ ಭಾಗವು ಹಸಿಯಾಗಿಯೇ ಇದ್ದಿತು. ಜಕ್ಕಣನ ಮುಖವು ಆಗ ಕಳೆಗುಂದಿತು.

ಆಗ ದೊರೆ ಬಂದು ಬಾಲಕನ ಮಾತಿನಲ್ಲಿ ವಿಶ್ವಾಸ ತಳೆದು ಮೂರ್ತಿಯನ್ನ ಒಡೆಯಲು ಆಜ್ಞಾಪಿಸಿದನು. ಆಗ ನಾಭಿ ಪುಟದಿಂದ ಒಂದು ಕಪ್ಪೆ ಹೊರ ಬಂದಿತು.

ಇದನ್ನು ಕಂಡು ಹುಡುಗನು ಘೋಷಿಸಿದನು–
"ಅದೋ ನೋಡಿರಿ! ಶುದ್ಧ ಶಿಲೆಯಿದ್ದರೆ ನೀರಾಗಲಿ, ಕಪ್ಪೆಯಾಗಲಿ ಒಳಗೆ ಇರಲಿಕೆ ಸಾಧ್ಯವಿಲ್ಲ."

ಅರಸನು ಹುಡುಗನನ್ನುಆಲಂಗಿಸಿ ಕೇಳಿದನು–
"ನೀನು ಯಾರ ಮಗ?"

"ಈ ದೇವಾಲಯ ನಿರ್ಮಿಸಿದ ಅಮರಶಿಲ್ಪಿ ಜಕ್ಕಣಾಚಾರ್ಯನ ಮಗ, ಡಂಕಣ ನಾನು."

"ಇದೆಲ್ಲ ಸುಳ್ಳು. ನನಗೆ ಮಗನೇ ಹುಟ್ಟಿಲ್ಲ." ಎಂದು ನುಡಿದನು.

ಬಾಲಕ: "ನಾನು ನಿನ್ನ ಮಗನೇ"

ಜಕ್ಕಣ: "ಸುಳ್ಳು, ಸುಳ್ಳು."

ಬಾಲಕ: ವಸ್ತು ಸ್ಥಿತಿಯನ್ನು ಈ ಸಭೆಯಲ್ಲಿ ವಿವರಿಸಲು ನನಗೆ ನಾಚಿಕೆ. ಆದರೆ ಬಹಿರಂಗಸಾಧನೆಗಳಿಂದಲೇ ಮಹಾರಾಜರು ನಮ್ಮೀರ್ವರ ಸಂಬಂಧ ನಿರ್ಣಯಿಸಲಿ ನಮ್ಮ ವಂಶದಲ್ಲಿಯೇ ಶಿಲ್ಪ ವಿದ್ಯೆ ನೆಲಸಿರುವದು ಎಲ್ಲರಿಗೂ ಗೊತ್ತು. ಇದು ಮೊದಲನೆಯ ಪ್ರಮಾಣ.

ರಾಜಾ: "ನಿನ್ನನ್ನು ತಂದೆ ಬಿಟ್ಟು ಕೊಡಲು ಕಾರಣವೇನು?"

ಡಂಕಣ: "ಅದನ್ನೇ ಹೇಳಲು ನನ್ನ ಮನ ಹಿಂಜರಿಯುತಿದೆ. ಆದರೆ ನನ್ನ ತಾಯಿಯ ಮರ್ಯಾದೆ ಕಾಯಲು ಹೇಳದೆ ವಿಧಿ ಇಲ್ಲ. ಈ ನನ್ನ ತಂದೆಯು ನನ್ನ ಜನನ ಕಾಲದ ಕುಂಡಲಿಯನ್ನು ಪರೀಕ್ಷಿಸಿ ಈ ಶಿಶು ವ್ಯಭಿಚಾರದಿಂದ ಜನಿಸಿದೆ ಎಂದು ಅರ್ಧಮರ್ಧ ಜ್ಞಾನದಿಂದ ತಿಳಿದ. ಅಂದೇ ಗೃಹ ತ್ಯಾಗ ಮಾಡಿ ದೇಶಾಂತರ ಹೊರಟ ನಾನೊ? ಬೆಳೆದಂತೆ ಜ್ಯೋತಿ ಶಾಸ್ತ್ರವನ್ನು ಚೆನ್ನಾಗಿ ಅಭ್ಯಾಸಿಸಿದೆ. ನನ್ನ ತಂದೆ ಗಣಿತದಲ್ಲಿ ತಪ್ಪಿರುವನೆಂದು ಅವಗತ ಆಯಿತು. ನನ್ನ ತಾಯಿ ಜಾರಿಣಿ ಎಂದದು ಅಪವಾದ ಹೊರಸಿದ ಈ ನನ್ನ ತಂದೆಗೆ ಯುಕ್ತ ಶಾಸನ ಆಗಿಯೇ ತೀರಬೇಕು. ಈ ಮಿಥ್ಯಾಕೋಪದಿಂದ ಎದೆಯೊಡೆದು ಕೊಂಡು ನನ್ನ ತಾಯಿ ಹೃದ್ರೋಗ ಹತ್ತಿ ತೀರಿಕೊಂಡಳು. ಇದೋ ಇದು ನನ್ನ ಜನ್ಮ ಕುಂಡಲಿ ಬಲ್ಲವರು ಬೇಕಾದರೆ ಸತ್ಯ ಅರಿಯಿಲಿ"

ಆಗ ಜನ್ಮ ಕುಂಡಲಿಯನ್ನು ಖ್ಯಾತ ಸಾಮುದ್ರಿಕರು ಜಕ್ಕಣನು ಪರೀಕ್ಷಿಸಿದರು. ಆಗ ಜಕ್ಕಣನಿಗೆ ತನ್ನ ತಪ್ಪಿನ ಅರಿವೂ ಪಶ್ಚಾತಾಪ ಏಕಕಾಲಕ್ಕೆ ಆದವು. ಅನಂತರ ತನ್ನ ಪ್ರತಿಜ್ಞಾನುಸಾರ ಜಕ್ಕಣನು ಬಲದೋಳು ಕತ್ತರಿಸಿಕೊಳ್ಳಲು ಖಡ್ಗಕ್ಕೆ ಕೈ ಚಾಚಿದನು. ಆಗ ಅರಸು ತಡೆದು ನುಡಿದನು–
"ಜಕ್ಕಣ, ಈ ಆತ್ಮಹತ್ಯೆ ತರವಲ್ಲ."

ಜಕ್ಕಣ: "ನನ್ನ ಪ್ರತಿಜ್ಞೆಗೆ ಭಂಗವಾಗಕೂಡದು."

ರಾಜಾ: ಶಿಲ್ಪಬ್ರಹ್ಮನೆ, ನನ್ನ ಕೊನೆಯ ಆಕಾಂಕ್ಷೆ ನೀನು ಪೂರೈಸತಕ್ಕದ್ದು. ನೀನು ನಿನ್ನ ಮಗ ಇಬ್ಬರೂ ಕೂಡಿ ಇನ್ನೊಂದು ದಿವ್ಯ ದೇವಾಲಯ ನಿರ್ಮಿಸಿರಿ. ಆಮೇಲೆ ಕರಚ್ಛೇದದ ವಿಚಾರ"

ಅರಸನ ಅನುಜ್ಞೆಯಂತೆ ತಂದೆ, ಮಗ ಇಬ್ಬರೂ ದೇವಾಲಯ ಕಾರ್ಯದಲ್ಲಿ ತತ್ಪರರಾಗಿ ಮುಗಿಸಿದರು ಇಂದಿಗೂ ಬೇಲೂರಿನಲ್ಲಿ ಚೆನ್ನ ಕೇಶವನ ಎರಡು ಮೂರ್ತಿಗಳುಂಟು. ಒಂದರ ನಾಭಿ ಮೂಲದಲ್ಲಿ ಭಿನ್ನತೆ ಎದ್ದು ಕಾಣುವುದು. ಗದಗ ನಗರದಲ್ಲಿಯ ವೀರನಾರಾಯಣಸ್ವಾಮಿಯ ಮೂರ್ತಿಯನ್ನು ಜಕ್ಕಣನೇ ಹೊಯ್ಸಳ ದೊರೆಯ ಆಕಾಂಕ್ಷೆಯಂತೆ ಸುಂದರತರವಾಗಿ ನಿರ್ಮಿಸಿದನಂತೆ! [ಮೂಲ: ಸಂಸ್ಕೃತ ಪ್ರವಾದ–ಮಧುರವಾಣಿಯಿಂದ]

ಮಾನವತಾವಾದಿ ಬಸವಣ್ಣ

—ಸ. ಸ. ಮಾಳವಾಡ

ಪಾಶ್ಚಾತ್ಯವಿಚಾರಪ್ರಣಾಲಿಯಲ್ಲಿ 'ಮಾನವತಾವಾದ'ವು ಒಂದು ಪಂಥವಾಗಿ (School) ಪರಿಗಣಿತವಾಗಿದೆ. ಆ ಪದದ ವ್ಯಾಖ್ಯೆಯ ಬಗೆಗೂ ಏಕಾಭಿಪ್ರಾಯವು ಮೂಡಿಬಂದಿಲ್ಲ ಆದರೆ ಸರ್ವ ಸಾಮಾನ್ಯವಾದ ನಿಲುವೆಯೊಂದನ್ನು ಹೀಗೆ ಹೇಳಬಹುದು. ಮಾನವನನ್ನು ಹೆಚ್ಚು ಸತ್ಯವಾದ ಬಗೆಯಲ್ಲಿ ಮಾನವನನ್ನಾಗಿ ಮಾಡುವುದೇ ಮಾನವತಾವಾದಿಯ ನಿಲುವೆ. ಮಾನವನಲ್ಲಿ ಸುಪ್ತವಾಗಿರುವ ಶಕ್ತಿಯನ್ನು ಹೊರಹೊಮ್ಮಿಸಲು ನಿಸರ್ಗದ, ಸಮಾಜ ವ್ಯವಸ್ಥೆಯ ಎಲ್ಲ ಅನುಕೂಲತೆಗಳಿಗೆ ಮುಕ್ತದ್ವಾರವನ್ನು ಒದಗಿಸುವ ದೃಷ್ಟಿಯು ಆ ನಿಲುವೆಯಲ್ಲಿದೆ. ಎಲ್ಲಾ ಮಾನವರಿಗೆ ಅವಕಾಶಗಳ ಸಮಾನತೆಯನ್ನು ದೊರಕಿಸಿ ಕೊಡುವುದು ಈ ಪಥದ ಗುರಿಯಾಗಿದೆ. ಗುರಿ ಹೀಗಿದ್ದರೂ ಅದರ ಸಾಧನಮಾರ್ಗ ಆ ಬಗೆಗೆ ಇರುವ ದೃಷ್ಟಿಕೋಣ ಇವುಗಳು ಬೇರೆ ಬೇರೆಯಾಗಿವೆ. ಕೆಲವನ್ನು ಇಲ್ಲಿ ಗಮನಿಸಬಹುದು.

1. ಅನಿರ್ಬಂಧಿತವಾದ ಮಾನವೀಯ ಅನುಭವದ ಹಿರಿಮೆಯನ್ನು ಸಮರ್ಥಿಸುವುದು.
2. ಪುಸ್ತಕಪಾಂಡಿತ್ಯದ ಸಂಕುಚಿತನದ ದರ್ಪವನ್ನು ಪ್ರತಿಭಟಿಸುವುದು.
3. ಮಾನವನ ಅರಿವಿಗೆ ಯಾವನಿರ್ಬಂಧವನ್ನೂ ಹಾಕದೆ ಇರುವಂತೆ ನೋಡಿಕೊಳ್ಳುವುದು.
4. ಧಾರ್ಮಿಕ ಸಂಸ್ಥೆಯಿಂದ ವ್ಯಕ್ತಿಯ ವಿಚಾರ ಸ್ವಾತಂತ್ರ್ಯವನ್ನು ರಕ್ಷಿಸುವುದು.
5. ಮನಸ್ಸಿನ ಮುಕ್ತದ್ವಾರವನ್ನು ಕಾಯ್ದುಕೊಳ್ಳುವುದು.
6. ಮಾನವನ ಮತಿಯು ನಿರಕುಂಶವಾಗಿ ಉಳಿಯುವ ವ್ಯವಸ್ಥೆ.

ಹೀಗಿವೆ ಮಾನವತಾವಾದದ ದೃಷ್ಟಿಕೋಣ ಮತ್ತು ಸಾಧನ ಮಾರ್ಗಗಳು. ಬಸವಣ್ಣನವರ ವಿಚಾರ, ಆಚಾರ, ಪ್ರಚಾರಗಳಲ್ಲಿ ಮೇಲ್ಕಂಡ ಎಲ್ಲ ಅಂಶಗಳೂ ಸಾಮಾನ್ಯವಾಗಿ ಅಡಕವಾದಂತಿವೆ.

ಕ್ರಿಸ್ತಪೂರ್ವ ಐದನೆಯ ಶತಕದ ಸಾಕ್ರೆಟೀಸ್‌ನ ವಿಚಾರ ಪ್ರಣಾಲಿಯಲ್ಲಿ ಮಾನವತಾವಾದದ ಬಿತ್ತುಗಳು ಅಡಗಿದ್ದವೆನ್ನಬಹುದು. ಹಾಗಿದ್ದರೂ ಪಾಶ್ಚಾತ್ಯರ ಜೀವನವಾಹಿನಿಯಲ್ಲಿ ಮಾನವತಾವಾದವು ಬಹುಕಾಲದವರೆಗೆ ಮುಸಕಾಗಿಯೇ ಉಳಿದಿತ್ತು. ಈ ದಿಸೆಯಲ್ಲಿ ಇಟಲಿ ದೇಶವು ಪುರೋಗಾಮಿಯಾಯಿತೆಂದು ಭಾವಿಸಲಾಗಿದೆ. ಪ್ರಭುತ್ವದವರು, ಸಂಘಟಿತ ಧಾರ್ಮಿಕ ಸಂಸ್ಥೆಗಳು ಮಾನವನ ಹಕ್ಕಾದ ಮನಸ್ಸಿನ ಮುಕ್ತ ದ್ವಾರಕ್ಕೆ ಅಡೆತಡೆಗಳನ್ನು ಯಾವಾಗಲೂ ತಂದಿದ್ದಾರೆ. ಹದಿನೆಂಟನೆಯ ಶತಕದ ಮಾರ್ಟಿನ್‌ಲೂಥರ್‌ನಿಂದ 1789 ರ ಫ್ರೆಂಚ್ ಕ್ರಾಂತಿಯಿಂದ ಮಾನವತಾವಾದಕ್ಕೆ ಕಳೆಯೇರಿತು. ಮಧ್ಯ ಆಧುನಿಕಯುಗಗಳ ಸಂಕ್ರಮಣದ ಅವಧಿಯಲ್ಲಿ ಪಾಶ್ಚಾತ್ಯರು ಮಾನವತಾವಾದಕ್ಕೆ ಪ್ರಾಮುಖ್ಯವನ್ನುಕೊಟ್ಟರು. ಅನೇಕ ವಿಚಾರವಂತ ಲೇಖಕರು ತಮ್ಮ ವಿಚಾರ ಪ್ರಣಾಲಿಯನ್ನು ಹರಡಿದರು. ಆಗ ಚರ್ಚಿನ ಅಂಕಿತಕ್ಕೆ ಒಳಗಾಗದ ಧರ್ಮಾತೀತ (Secular) ವಿಚಾರ ಪ್ರಣಾಲಿ ಪ್ರಾಧಾನ್ಯ ಪಡೆಯಿತು. ಮಧ್ಯಯುಗದನಿರ್ಬಂಧಗಳನ್ನು ಸಡಲಿಸುವ ಪ್ರಯತ್ನನಡೆಯಿತು. ಸರಳವಾದವಿಚಾರವನ್ನು ಸರಳವಾದ ಭಾಷೆಯಲ್ಲಿ ಒಡಮೂಡಿಸಬೇಕೆನ್ನುವ ಆಂದೋ

ಲನ ತಲೆದೋರಿತು. ಬೌದ್ಧಿಕ, ನೈತಿಕ ವಿಕಾಸಕ್ಕೆ ಪರಿಣಾಮಕಾರಿಯಾದ ಹಾದಿಯನ್ನು ಸಮರ್ಥಿಸಲಾಯಿತು..

ಮಾನವತಾವಾದದ ಗುರಿಯನ್ನು ಸಾಧಿಸುವಲ್ಲಿ ಮುಖ್ಯವಾದತೊಡಕೆಂದರೆ ಮಾನವನ ಸ್ವಾರ್ಥದೃಷ್ಟಿಯೇ ಆಗಿದೆ. ಈ ಬಗೆಯ ಸ್ವಾರ್ಥದಿಂದಾಗಿ ಸಂಪತ್ತು, ಅಧಿಕಾರ, ಜ್ಞಾನ, ಸೌಲಭ್ಯಗಳ ಕೇಂದ್ರೀಕರಣ ನಡೆಯುತ್ತಿದೆ. ಸ್ವಾರ್ಥದೃಷ್ಟಿಗೆ ಬುದ್ಧಿವಂತಿಕೆಯ, ವಿಪರ್ಯಸ್ತಧಾರ್ಮಿಕ ಕಲ್ಪನೆಯ, ಪ್ರಭುತ್ವದ ನೆರವು ದೊರೆತಾಗ ಮಾನವನ ಮಾನವತ್ವವೇ ನಶಿಸಿಹೋಗುವ ಸನ್ನಿವೇಶ ತಲೆದೋರುತ್ತದೆ. ಪಾಶ್ಚಾತ್ಯಶ್ವೇತವರ್ಣೀಯರು, ಕಪ್ಪುಜನಾಂಗದವರ ಭಾರತದ ಶ್ರೇಷ್ಠವರ್ಣೀಯರು, ನಿಮ್ನವರ್ಣದವರ ಮಾನವತೆಯನ್ನೂ ಗುರುತಿಸದಂತಹ ಸಂಕುಚಿತ ದೃಷ್ಟಿಯನ್ನು ಪ್ರದರ್ಶಿಸಿದ್ದಾರೆ. ಪಾಶ್ಚಾತ್ಯ ದೇಶಗಳಲ್ಲಿ ಮಾನವೀಯ ಸಮಾನತೆಯನ್ನು ಗುರುತಿಸದೆ ಇರುವ ದೃಷ್ಟಿಯ ಒಂದು ಕ್ರೂರ ಪ್ರತಿಕ್ರಿಯೆಯು ಹಿಟ್ಲರನ "ಜನಾಂಗ ಶ್ರೇಷ್ಠತೆ"ಯ ಘೋಷಣೆಯಾಗಿ ಪರಿಣಮಿಸಿತು. ಅದರ ಕಹಿಫಲಗಳನ್ನು ಜಗತ್ತು ಇಂದಿಗೂ ಕಾಣುತ್ತಿದೆ.

ಏಸುಕ್ರಿಸ್ತ ಮಾನವಪ್ರೇಮದ ಸಂದೇಶವನ್ನೇ ಬಿತ್ತರಿಸಿದ. ಆದರೆ ಧಾರ್ಮಿಕ ಆಚರಣೆ ಪ್ರಬಲವಾಗಿ ಪರಮಾತ್ಮನೇ ಹಿಂದೆ ಉಳಿದ ಸನ್ನಿವೇಶಗಳು ಪಾಶ್ಚಾತ್ಯ ದೇಶಗಳಲ್ಲಿಯೇ ತಲೆದೋರಿದವು. ಇಲ್ಲವೆ ಮಾನವನ ಆದೋ ಚೇತನವೇ ಮುಂದಾಗಿ ಆತನ ದೈವತ್ವವು ಹಿಂದೆ ಉಳಿದ ಸಂದರ್ಭಗಳೂ ಇವೆ. ಸಮಾಜಸ್ವಾಸ್ಥ್ಯಕ್ಕೆಂದು ರಚಿತವಾದ ಧರ್ಮಶಾಸ್ತ್ರ ಮಾನವ-ಮಾನವರಲ್ಲಿ ವಿಷಮತೆಯನ್ನು ಬಿತ್ತುವ ಸಾಧನವಾಗಿ ಬಳಕೆಯಾದ ಉದಾಹರಣೆಗಳು ಭಾರತ ದೇಶದಲ್ಲಿಯೂ ದೊರೆಯುತ್ತಿವೆ. ಸಕಲ ಜೀವಿಗಳಲ್ಲಿ–ಜಡದಲ್ಲಿಯೂ ಕೂಡ–ದೇವಾಂಶವನ್ನು ಎಂದಿನಿಂದಲೂ ಒಪ್ಪಿಕೊಂಡ ಭಾರತೀಯರಿಗೆ 'ಮಾನವತಾವಾದ' ಎಂಬ ಪಂಥದ (School) ಅವಶ್ಯಕತೆ ಇರಲಿಲ್ಲವೇನೋ ನಿಜ. ಆದರೆ ಧರ್ಮಶಾಸ್ತ್ರದ ನೆರವಿನಿಂದ ಸಮಾಜ ವ್ಯವಸ್ಥೆಯ ನೆವದಿಂದ ಜನ್ಮ, ಜಾತಿ, ವೃತ್ತಿ, ಲಿಂಗಭೇದ ಕಲ್ಪಿಸಿದಾಗ ಮಾನವರಲ್ಲಿ ಸಮಾನತೆಯು ಅಳಿದು ಹೋದ ದುರ್ಧರ ಸನ್ನಿವೇಶಗಳೂ ನಮ್ಮಲ್ಲಿ ಬೆಳೆದು ಬಂದುವು. ಆಗ ಸಕಲ ಮಾನವರಲ್ಲಿಯ ಸಮಾನತೆಯನ್ನು ಸಮರ್ಥಿಸುವ, ಸಾಧಿಸುವ ಬುದ್ಧ ಬಸವರಂತಹ ಕ್ರಾಂತಿ ಪುರುಷರು ಭಾರತದಲ್ಲಿ ಉದಯವಾದರು. ಸದ್ಭಾವ, ಸದಾಚಾರಗಳು ಮಾನವೀಯ ಸಮಾನತೆಗೆ ತಳಹದಿಯಾಗಬೇಕೆಂದು ಬುದ್ಧ ಘೋಷಿಸಿದ. ಕ್ರಿ. ಪೂ ಆರನೆಯ ಶತಕದಲ್ಲಿ ಸದ್ಭಾವ, ಸದಾಚಾರಗಳಿಗೆ ಸದ್ಭಕ್ತಿಯನ್ನೂ ಸೇರಿಸಿ ಬಸವಣ್ಣ ದಿಟ್ಟವಾದ ಹೊಸ ಹೆಜ್ಜೆಗಳನ್ನಿಟ್ಟ. ಕ್ರಿ. ಶ. ಹನ್ನೆರಡನೆಯ ಶತಕದಲ್ಲಿ ಬುದ್ಧ, ಬಸವರ ಕಾಲದ ಧಾರ್ಮಿಕ, ಸಾಮಾಜಿಕ, ಅವನತಿಯು ಒಂದೇ ಬಗೆಯದ್ದಾಗಿತ್ತು. ಅಂತೆಯೇ ಬುದ್ಧ, ಬಸವರ ಉದಯದ ಅವಶ್ಯಕತೆಯು ಆರಂಭದಲ್ಲಿ ಹೆಚ್ಚಾಗಿ ಕಂಡು ಬಂದಿತ್ತು. ಅವರಿಬ್ಬರ ಕಾಲದಲ್ಲಿಯೂ ಅವಿರತವಾದ ತಾತ್ವಿಕ ಚರ್ಚೆಗಳು ಜಟಿಲವಾದ ವ್ರತನೇಮಗಳು ಜಾತಿಭೇದಗಳು ಬೆಳೆದು ನಿಂತಿದ್ದವು. ಕರ್ಮಕಾಂಡಕ್ಕೆ ಅನುಚಿತವಾದ ಮಹತ್ವ ದೊರೆತಿತ್ತು. ಧರ್ಮದ ಹೆಸರಿನಲ್ಲಿ ಅಧರ್ಮ ರೂಢವಾಗಿತ್ತು. ಹಿಂಸಾವೃತ್ತಿ ಬೆಳೆದಿತ್ತು. ಬಸವಣ್ಣನ ಕಾಲಕ್ಕೆ ಮತಮತಾಂತರಗಳ ಗಲಭೆ ಇನ್ನೂ ಹೆಚ್ಚಿತು. ಹೋಮದ ನೆವದಿಂದ ಹೋತವನ್ನು ತಿನ್ನುವ ಪದ್ಧತಿಯನ್ನು ಬಸವಣ್ಣ ವಿಡಂಬಿಸುವ ಪರಿಸ್ಥಿತಿಯೊದಗಿ ಬಂದಿತು. ತಾತ್ವಿಕ ಚರ್ಚೆಗಳ ಹೋರಾಟದಲ್ಲಿ ವಿವಿಧ ಪಂಥಗಳ ಏರಾಟದಲ್ಲಿ ಸತ್ಯ ಶುದ್ಧವಾದ ಭಕ್ತಿ ಮುಸುಳಿದಂತಾಗಿತ್ತು. ಸಾಮಾನ್ಯ ಜನತೆಗೆ ಧರ್ಮದ ನಿಜವಾದ ತಿಳಿವಿನಿಂದ ವಂಚಿತವಾಗಿತ್ತು, ಹಾಳು ಮೊರಡಿಗಳಲ್ಲಿ, ಊರದಾರಿಗಳಲ್ಲಿ, ಗ್ರಾಮದ ಮಧ್ಯದಲ್ಲಿ ಮಾರಯ್ಯ, ಬೀರಯ್ಯ, ಅಂತರ, ಬೆಂತರ, ಕಾಳಯ್ಯ, ಕೇತಯ್ಯಗಳೆಂಬ ನೂರಾರು ಕ್ಷುದ್ರ ದೇವತೆಗಳು ರೂಢವಾಗಿದ್ದವು. ಆದರಿಂದ ಪರಮಾತ್ಮನ ಬಗೆಗೆ ಸರಿಯಾದ ಕಲ್ಪನೆ ಜನತೆಯಲ್ಲಿ ಕಂಡುಬರುತ್ತಿದ್ದಿಲ್ಲ. ಅನುಚಿತವಾದ ಅಧಿಕಾರ ಪಡೆದು ಅಟ್ಟಹಾಸ ಮಾಡುತ್ತಿದ್ದ ಪುರೋಹಿತ ವರ್ಗದ ದರ್ಪ ಹೆಚ್ಚಾಗಿತ್ತು. ಪಂಡಿತರು ಪಾಂಡಿತ್ಯದ ಪ್ರತಿಷ್ಠೆಯನ್ನು ಮೆರೆಯುವಲ್ಲಿ ನಿರತರಾಗಿದ್ದರು. ಅವರಿಗೆ ಮಾನವ-ಮಾನವರಲ್ಲಿಯ ಸಮಾನತೆಯ ದೃಷ್ಟಿಯಿರಲಿಲ್ಲ. ಅನ್ಯಾಯದ ತಳಹದಿಯ ಮೇಲೆ ಮಾನವರೆಲ್ಲ ಉಚ್ಚ-ನೀಚ ಭೇದವನ್ನು ಕಲ್ಪಿಸಲಾಗಿತ್ತು. ಮಾತಿನಂತೆ ಮನವಿಲ್ಲದ ಜಾತಿಡೊಂಬರದ ಪ್ರಾಬಲ್ಯವಿತ್ತು. ಹೀಗಾಗಿ

ಮಾನವರನ್ನು ಒಂದುಗೂಡಿಸುವ ಅವರ ಸಮಾನತೆಯನ್ನು ಸಮರ್ಥಿಸುವ ಪರಿಸ್ಥಿತಿ ಆಗ ಅಸ್ತಿತ್ವದಲ್ಲಿರಲಿಲ್ಲ. ಈ ಬಗೆಯ ವಾತಾವರಣವನ್ನುಕಂಡ ಬಸವಣ್ಣ ಹನ್ನೆರಡನೆಯ ಶತಮಾನದ ಮಧ್ಯದಲ್ಲಿ ಪ್ರಚಂಡವಾದ ಧಾರ್ಮಿಕ ಸಾಮಾಜಿಕ ಆಂದೋಲನದ ಪುರಸ್ಕರ್ತನಾಗಿ ಶ್ರೇಷ್ಠ ಮಾನವತಾವಾದಿಯಾಗಿ ಪರಿಣಮಿಸಿದ.

ಜಾತಿ, ಮತ, ಪಂಥಗಳು ಧರ್ಮಶಾಸ್ತ್ರಗಳು ಮಾನವೀಯ ಸಮರ್ಥತೆಗೆ ತೊಡಕಾಗಿ ಪರಿಣಮಿಸಿದುದನ್ನು ಕಂಡ ಬಸವಣ್ಣ ಅವುಗಳ ವೈಷಮ್ಯವನ್ನು ತೊಡೆದು ಹಾಕುವ ಕ್ರಾಂತಿಯನ್ನು ಕೈಕೊಂಡ. ಕ್ಲಿಷ್ಟವಾದ ಮಡಿವಂತರ ಭಾಷೆಯಲ್ಲಿ ಹುದುಗಿದ ಧಾರ್ಮಿಕ ತತ್ವಗಳನ್ನು ಜನಸಾಮಾನ್ಯರಿಗಾಗಿ ಕನ್ನಡಿಸಿದ ತಾತ್ವಿಕ ಜಟಿಲತೆಯನ್ನು ಅಲ್ಲಗಳೆದು ಜನಸಾಮಾನ್ಯರಿಗೆ ಸುಗಮವಾದ ಹಾದಿಯನ್ನು ಹಾಕಿಕೊಟ್ಟ. ಬಸವಣ್ಣನಿಂದ ಜನತಾಧರ್ಮವು ರೂಪುಗೊಂಡಿತು. ಧಾರ್ಮಿಕ ವ್ರತಾಚರಣೆಗಳ ಬಾಹ್ಯ ಕ್ರಿಯೆಯಲ್ಲಿ ತೊಡಗಿದವರಿಗೆ ಅಂತರಂಗಶುದ್ಧಿಯನ್ನು ಬೋಧಿಸಿ ಅಂತಹ ಅಂತರಂಗಶುದ್ಧಿಯಿರುವವರನ್ನೆಲ್ಲಾ ಒಂದುಗೂಡಿಸಿದ. ಅಸಂಖ್ಯ ದೇವತೆಗಳ ಉಪಾಸನೆಯಲ್ಲಿ ತೊಡಗಿ ಪಂಗಡವಾಗಿದ್ದ ಜನತೆಗೆ ಏಕದೇವೋಪಾಸನೆಯನ್ನು ಬೋಧಿಸಿ ಅವರಲ್ಲಿ ಸ್ವಾಮರಸ್ಯನ್ನು ತಂದ. ಯಜ್ಞಯಾಗಾದಿಗಳಿಂದ ರೂಢವಾಗಿದ್ದ ಹಿಂಸಾಕೃತ್ಯವನ್ನು ಖಂಡಿಸಿ ಕರುಣೆ, ಮಾನವೀಯ ಪ್ರೇಮಗಳ ಸಂದೇಶದಿಂದ ಮಾನವರಲ್ಲಿ ಮಾನವತೆ–ಬೆಳೆಯುವಂತೆ ಮಾಡಿದ ಧರ್ಮದ ನೆವದಿಂದ ಅಲಸಿಗಳಾಗಿಭಿಕ್ಷಾವೃತ್ತಿಯನ್ನು ಅನುಸರಿಸಿ ಇಲ್ಲವೆ ಶೋಷಕರಾಗಿ ಸಾಮಾಜಿಕ ಆರ್ಥಿಕ ರಂಗಗಳಲ್ಲಿ ವೈಷಮ್ಯವನ್ನುಂಟು ಮಾಡಿದ ಪರಿಸ್ಥಿತಿಯನ್ನು ಅಲ್ಲಗಳೆದು ಎಲ್ಲರೂ ಸತ್ಯ ಶುದ್ಧ ಕಾಯಕದಿಂದ ಬಾಳಬೇಕು. ಆರೊಬ್ಬರಿಗೂ ಇನ್ನೊಬ್ಬರ ದುಡಿಮೆಯಮೇಲೆ ಚರಿತಾರ್ಥ ಸಾಗಿಸುವ ಅಧಿಕಾರವಿಲ್ಲ. ಜಂಗಮರು ಕಾಯಕದಲ್ಲಿ ತೊಡಗಬೇಕು–ಎಂಬ ಸಂದೇಶವನ್ನು ಸಾರಿ ತಾನೇ ಸ್ವತಃ ಕಾರ್ಯದಲ್ಲಿ ತೊಡಗಿದ. "ಕಾಯಕವೇ ಕೈಲಾಸ" ಸೂತ್ರವನ್ನು ಅಂದಿನ ಜನತೆಯಲ್ಲಿ ರೂಢಿಸಿದ. ಮರಣದನಂತರ ಸ್ವರ್ಗ ನರಕಗಳ ಕಲ್ಪನೆಯಿಂದ ಇಹದ ಬಾಳನ್ನು ಹದಗೆಡಿಸಿದ ಸನ್ನಿವೇಶದಿಂದಾಗಿ ಜನತೆಯಲ್ಲಿ ಅಜ್ಞಾನ ಮೌಢ್ಯಗಳು ನೆಲಸಿದ್ದವು. ಜನತೆಯ ಇಂತಹ ಅಜ್ಞಾನ, ಮೌಢ್ಯಗಳನ್ನು ಹೊಡೆದೋಡಿಸುವ ಕಾರ್ಯದಲ್ಲಿ ಬಸವಣ್ಣ ಮಗ್ನನಾದ. ಕರ್ತಾರನ ಕಮ್ಮಟ, ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರು' ಎಂಬ ಸೂತ್ರದಿಂದಅಂದಿನ ಜನತೆಯಲ್ಲಿ ವಿದ್ಯುತ್ಸಂಚಾರವಾಗಿರಬೇಕು. ದೇವಲೋಕ, ಮರ್ತ್ಯಲೋಕಗಳೆಂಬವು ದೂರ ಇಲ್ಲ. ಇಹದ ಬಾಳಿನಲ್ಲಿಯೇ ಸದಾಚಾರ ಸದ್ಭಕ್ತಿಗಳಿಂದ ಸ್ವರ್ಗವನ್ನು ದುರಾಚಾರ ಡಂಭಾಚಾರಗಳಿದ ನರಕವನ್ನು ಸೃಷ್ಟಿಸಬಹುದೆಂಬ ಬಸವಣ್ಣ ಹೇಳಿದ ಮಾತು ಅಂದಿನ ಜನತೆಗೆ ಹೊಸ ಹಾದಿಯ ದೀಪವಾಯಿತು. ಜನ್ಮದಿಂದ, ವೃತ್ತಿಯಿಂದ ಯಾರೂ ಮೇಲು-ಕೀಳು ಆಗಲಾರರು ಎಂಬ ಸಂದೇಶದಿಂದ ಅಂದಿನ ಜನತೆಯಲ್ಲಿಯ ಸಾಮಾಜಿಕ ವೈಷಮ್ಯವನ್ನು ಪ್ರತಿಭಟಿಸುವುದು ಸಾಧ್ಯವಾಯಿತು. ಅಂತರಂಗಶುದ್ಧಿ, ಭಕ್ತಿಪ್ರೇಮ, ವಿನಯಗಳಿಂದ ಜನತೆಯಲ್ಲಿ ಬಾಂಧವ್ಯವನ್ನು ಬಲಿಸುವುದು ಬಸವಣ್ಣನಿತೆ ಆಗ ಸಾಧ್ಯವಾಯಿತು. ಮಾನವರಲ್ಲಿಯ ಕೃತಕ ಅಂತಸ್ತುಗಳನ್ನು ಅಲ್ಲಗಳೆದು ಅವರಲ್ಲಿ ಸಮಾನತೆಯನ್ನು ಮೂಡಿಸುವ ಕಾರ್ಯದಲ್ಲಿ ಬಸವಣ್ಣ ಅಂದು ಸಫಲತೆ ಪಡೆದ. ಪರಮಾತ್ಮನ ಪಿತೃತ್ವವನ್ನು ಎಲ್ಲರೂ ಒಪ್ಪಿದಾಗ ಮಾನವರಲ್ಲಿ ಬಂಧುತ್ವದ ಕಲ್ಪನೆಯು ಬಂಧುರವಾಗುವುದು. ಆದುದರಿಂದ ಬಸವಣ್ಣನ ಕೂಡಲ ಸಂಗಮದೇವನೊಬ್ಬನೇ ಪರಮಾತ್ಮನೆಂಬ, ಆತನು ಎಲ್ಲರ ತಂದೆಯೆಂಬ ಶ್ರದ್ಧೆಯನ್ನು ತನ್ನಲ್ಲಿ ಬಲಿಸಿಕೊಂಡು ಇತರರಲ್ಲಿ ಅದನ್ನು ರೂಢಿಸಿ ಅಂದು ಸಾಮಾಜಿಕ ಬಾಂಧವ್ಯವನ್ನು ಸದೃಢಗೊಳಿಸಿದ. ಧರ್ಮಶಾಸ್ತ್ರಗಳ ಪ್ರಮಾಣಕ್ಕಿಂತ ವ್ಯಕ್ತಿಯ ಹೃದಯಾಂತರಾಳದ ಭಾವನೆಗೆ, ಅನುಭವಕ್ಕೆ ಪ್ರಾಶಸ್ತ್ಯವನ್ನು ಬಸವಣ್ಣ ತಂದುಕೊಟ್ಟು ಎಲ್ಲರೂ ಆಧ್ಯಾತ್ಮಿಕ ಅನುಭವನ್ನು ಎಲ್ಲರಿಗೂ ವಿನಿಯೋಗಿಸುವ ದೃಷ್ಟಿಯಿಂದ ಅನುಭವ ಮಂಟಪವನ್ನು ಸ್ಥಾಪಿಸಿದ. ಎಲ್ಲರಿಗೂ ಎಲ್ಲಾ ಮುಕ್ತ ದ್ವಾರವಿತ್ತು. ವಿವಿಧ ಜಾತಿಗಳ, ವೃತ್ತಿಗಳ, ಅಂತಸ್ತುಗಳ ಜನರು ಸದ್ಭಕ್ತಿ, ಸದಾಚಾರಗಳಿಂದ ಏಕೀಕೃತರಾಗಿ ಅಲ್ಲಿ ಸೇರುತ್ತಿದ್ದರು. ಮಾನವನ ಅರ್ಧಭಾಗವಾದ ಸ್ತ್ರೀಯನ್ನು ಹಿಂದಿನ ಧರ್ಮಶಾಸ್ತ್ರಗಳು, ಸಮಾಜ ವ್ಯವಸ್ಥೆಗಳೇ ಅಲಕ್ಷಿಸಿದ್ದವು. ಸ್ತ್ರೀಗೆ ಧಾರ್ಮಿಕರಂಗದ ಸೌಲಭ್ಯವನ್ನು ಅಲ್ಲಗಳೆಯಲಾಗಿತ್ತು. ಸ್ತ್ರೀಯ ಸುಪ್ತ ಶಕ್ತಿಗಳ ವಿಕಾಸಕ್ಕೆ ಅವಕಾಶವಿರಲಿಲ್ಲ.

ಬಸವಣ್ಣ ಧಾರ್ಮಿಕ ಸಮಾಜಿಕ ರಂಗಗಳಲ್ಲಿ ಸ್ತ್ರೀಗೆ ಸಮಾನತೆಯ ಅವಕಾಶವನ್ನು ಒದಗಿಸಿಕೊಟ್ಟ. ಇದರಿಂದಾಗಿ ಅಂದು ಮಹಿಳಾ ಜಾಗೃತಿಯು ಭರದಿಂದ ಸಾಗಿತು. ಅನೇಕ ವಚನಕಾರ್ತಿಯರು, ಉನ್ನತಮಟ್ಟದ ಶರಣೆಯರು ಆಗ ಅನುಭವಮಂಟಪದಲ್ಲಿ ಪಾಲುಗೊಂಡರು.

ಬಸವಣ್ಣನ ಬೋಧನೆ-ಸಾಧನೆಗಳಿಂದಾಗಿ ಅಂದು ಮಾನವೀಯ ಮೌಲ್ಯಗಳನ್ನು ವರ್ಧಿಸುವುದು ಸಾಧ್ಯವಾಯಿತು. ಮಾನವೀಯ ಹಿರಿಮೆಯನ್ನು ಸ್ಥಾಪಿಸುವ ದಿಸೆಯಲ್ಲಿ ಆಗ ರೂಢವಾಗಿದ್ದ ಬಸವಣ್ಣನ ಕ್ರಾಂತಿಯು ಕತ್ತರಿಸಿ ಹಾಕಿತು. ಬಸವಣ್ಣನಿಂದ ರೂಪಿತವಾದ ಜನತಾಧರ್ಮದಿಂದಾಗಿ ಪುಸ್ತಕ ಪಾಂಡಿತ್ಯ ಸಂಕುಚಿತತನದ ದರ್ಪಕ್ಕೆ ಆಗ ಅವಕಾಶವುಳಿಯಲಿಲ್ಲ. ಧಾರ್ಮಿಕ ಕಟ್ಟಳೆಗಳಿಗೆ ಪ್ರತಿಯಾಗಿ ವ್ಯಕ್ತಿಯ ವಿಚಾರ ಸ್ವಾತಂತ್ರ್ಯವನ್ನು ಬಸವಣ್ಣ ಸಮರ್ಥಿಸಿದ. ಅನುಭವ ಮಂಟಪದಲ್ಲಿ ಸೇರುತ್ತಿದ್ದ ವಿವಿಧ ವೃತ್ತಿಯ, ಅಂತಸ್ತಿನ ಶರಣರೆಲ್ಲ ಸರ್ವ ಸಮಾನ ಭಾವನೆಯಿಂದ ಸ್ವತಂತ್ರರೀತಿಯಿಂದ ತಂತಮ್ಮ ವಿಚಾರಗಳನ್ನು ಮಂಡಿಸುತ್ತಿದ್ದರು. ಹಳೆಯ ಕಟ್ಟಳೆಗಳಿಗೆ ಪಕ್ಕಾಗದೆ ಸ್ವತಂತ್ರ ದೃಷ್ಟಿಯಿಂದ ವಿಚಾರ ಮಾಡಲು ಆಗ ಜನತೆಗೆ ವಿಪುಲ ಅವಕಾಶ ದೊರೆಯಿತು. ಇಂತಹ ಸ್ವತಂತ್ರ ವಿಚಾರದ ಫಲವಾಗಿಯೇ ಬಸವಣ್ಣ ಹೊಸಕ್ರಾಂತಿಯನ್ನು ಮೂಡಿಸಲು ಮುಂದೆ ಬಂದ. ಬಸವ ಪೂರ್ವದ ಪರಿಸರದಲ್ಲಿ ಮನುಷ್ಯನ ಮುಕ್ತ ದ್ವಾರ ಸಾಧ್ಯವಾಗದಂತಹ ಬಗೆಬಗೆಯ ಕಟ್ಟಳೆಗಳನ್ನು ಪ್ರತಿಭಟಿಸಿದ. ಧಾರ್ಮಿಕ ಸಾಮಾಜಿಕ ರಂಗಗಳಲ್ಲಿ ಎಲ್ಲರಿಗೂ ಮುಕ್ತ ಧ್ವಾರ. ಎಲ್ಲರಿಗೂ ಸಮಾನ ಅವಕಾಶ ಎಂಬ ನವೀನ ಪಂಥವೊಂದು ಬಸವಣ್ಣನಿಂದಾಗಿ ಆಗ ರೂಢಿಯಲ್ಲಿ ಬಂದಿತು. ಅಂತೆಯೇ ಮಾನವತಾವಾದದ ಗುರಿಯನ್ನು ಸಾಧಿಸುವಲ್ಲಿ ಬಸವಕ್ರಾಂತಿಯು ಸಫಲತೆ ಪಡೆಯಿತು.

'ಪ್ರಗತಿ' ಎಂಬ ಪದವನ್ನು ನಾವು ಪುನಃ ಪುನಃ ಬಳಸುವುದುಂಟು. ಸಿಂಧು ಸಂಸ್ಕೃತಿಯ, ವೈದಿಕ ಸಂಸ್ಕೃತಿಯ ಕಾಲದಿಂದ ನಾವು ಪ್ರಗತಿಪರರಾಗಿದ್ದೇವೆ, ಎಂಬ ಮಾತೂ ಬರುತ್ತಿದೆ. ತರ್ಕಬದ್ಧವಾಗಿ ನ್ಯಾಯ ಸಮ್ಮತವಾಗಿ ಮುಂದುವರಿದಾಗ ಮಾತ್ರ ಪ್ರಗತಿಯು ಸಾಧನೆಯಾಗಿದೆ ಎನ್ನಬಹುದು. ಮಾನವ ವಿಚಾರ-ಆಚಾರಗಳಲ್ಲಿ ಶಾಸ್ತ್ರಗಳ, ಸಂಘಟಿತ ಧರ್ಮಸಂಸ್ಥೆಗಳ ಕಟ್ಟಳೆಗಳೇ ಪ್ರಧಾನವಾದ ಪ್ರಭಾವವನ್ನು ಬೀರುವ ಸನ್ನಿವೇಶಗಳಲ್ಲಿ ಮಾನವನ ಪ್ರಗತಿಗೆ ಅವಕಾಶ ದೊರೆಯುವುದು ಕಠಿಣವಾಗುತ್ತಿದೆ. ಏಕೆಂದರೆ ಅಂತಹ ಕಟ್ಟಳೆಗಳಿಗೆ ತರ್ಕವಾಗಲಿ, ನ್ಯಾಯ ಸಮ್ಮತವಾದ ದೃಷ್ಟಿಯಾಗಲಿ ತಳಹದಿಯಾಗಿರುವುದು ಕಂಡುಬಂದಿಲ್ಲ. ಮಾನವರಲ್ಲಿಯ ಸಮಾನತೆಯನ್ನೇ ಅಲ್ಲಗಳೆಯುವ ಸಂಪ್ರದಾಯ ಕಟ್ಟಳೆಗಳು ಅತಿರೇಕಕ್ಕಿಳಿದಾಗ ಬಸವಣ್ಣನಂತಹ ಮಾನವತಾವಾದಿಗಳ ಉದಯ ಅವಶ್ಯಕವಾಗುತ್ತಿದೆ. ಇಂತಹ ಅವಶ್ಯಕತೆಯನ್ನು ತುಂಬಿಕೊಡುವ ಕಾರ್ಯದಲ್ಲಿ ಬಸವಣ್ಣನ ಬೋಧನೆ-ಸಾಧನೆಗಳು ಫಲಪ್ರದವಾಗಿವೆ. ಸಕಲ ಮಾನವರಿಗೂ ನ್ಯಾಯ ದೊರಯಬೇಕೆನ್ನುವ ದೃಷ್ಟಿಯಿಂದ ವಂಚಿತವಾದ ಸಮಾಜದಲ್ಲಿ ಕೆಲವೊಂದು ಪಟ್ಟಭದ್ರರು ಸಂಪತ್ತಿನ, ಅಧಿಕಾರದ ಅನುಕೂಲತೆಗಳ ಗುತ್ತಿಗೆ ವಹಿಸುತ್ತಾರೆ. ಉಳಿದವರನ್ನು ಜಾತಿಯ, ವೃತ್ತಿಯ, ಲಿಂಗದ, ಸಂಸ್ಕಾರದ ಭೇದದಿಂದ ಅವರಿಗೆ ಮಾನವೀಯವಾಗಿ ದೊರೆಯಬೇಕಾದ ಅವಕಾಶಗಳಿಂದ ದೂರವಿಡುತ್ತಾರೆ. ಹಾಗೆ ಮಾಡುವುದು ತರ್ಕಬದ್ಧವೂ ನ್ಯಾಯ ಸಮ್ಮತವು ಅಲ್ಲ. ಅಂತೆಯೇ ಆ ಬಗೆಯ ಸನ್ನಿವೇಶಗಳನ್ನು ಪ್ರಗತಿಯೆಂದು ಕರೆಯಲಾಗದು. ಬೇಕಾದರೆ 'ವಿಗತಿ' ತಲೆದೋರಿದಾಗ ಬಸವಣ್ಣ ಮಾನವೀಯ ಮೌಲ್ಯಗಳ ಕೈವಾರಿಯಾಗಿ ಹೋರಾಟ ಕೈಕೊಳ್ಳಬೇಕಾಯಿತು. ಸಾಮಾಜಿಕ ಪ್ರಗತಿಯೆಂದು ವ್ಯಕ್ತಿಯನ್ನು ಹಿಂದೆ ಸರಿಸುವುದು, ವ್ಯಕ್ತಿಯ ಪ್ರಗತಿಯೆಂದು ಸಾಮಾಜಿಕ ವ್ಯವಸ್ಥೆಯನ್ನು ಕುಂಠಿತಗೊಳಿಸುವುದು ಸರಿಯಾಗಲಾರದು. ಬಸವಣ್ಣ ಆರಂಭಿಸಿದ ಆಂದೋಲನದಲ್ಲಿ ಸಾಮೂಹಿಕ ಪ್ರಗತಿಯು ವ್ಯಕ್ತಿ ವಿಕಾಸಕ್ಕೆ ಪೋಷಕವಾಗುವ ಬಗೆಯಲ್ಲಿ ಮೂಡಿ ಬಂದಿತು. ಬೋಧನೆಯೊಂದು ಉದಾತ್ತವಾದರೆ ಸಾಲದು. ಅದನ್ನು ಸಹಜವಾಗಿ ಸಾಮಾಜಿಕ ವ್ಯವಸ್ಥೆಯಲ್ಲಿ ರೂಢಿಸುವ ವ್ಯವಹಾರ್ಯ ಸಂಘಟನೆಯೂ ಬೇಕು. ಈ ದಿಸೆಯಲ್ಲಿ ಬಸವಣ್ಣನ ಕ್ರಾಂತಿಯು ಮಹತ್ವಪೂರ್ಣವಾಗಿದೆ ಮಾನವತಾ ವಾದದ ಗುರಿಯನ್ನು ಸಾಧಿಸುವ ಕ್ರಮವನ್ನು ಪ್ರತಿಪಾದಿಸುವ ಸಂದರ್ಭದಲ್ಲಿ Sir Julian Huxley ಅವರ ಉಕ್ತಿಯೊಂದು ಹೀಗಿದೆ.

Religion today is imprisoned in a theistic frame of ideas, compelled to

operate in the unrealities of a dualistic world. In the unitary Lumanistic frame it requires a new look and a new freedom. With the aid of one new Vesion It has the opportunity of escaping from the theistic impass of playing its proper role in the real world of unitary existence.

ದೇವರನ್ನು ಕುರಿತು ಅದ್ಭುತ ಕಲ್ಪನೆಯಲ್ಲಿ ಧರ್ಮವೇ ಸೆರೆಯಾಳಾದಂತಾಗುತ್ತಿದೆ. ಆಗ ಧಾರ್ಮಿಕ ಲೋಕವು. ವ್ಯವಹಾರಲೋಕ ಎಂಬ ದ್ವಂದ್ವದ ಅವಾಸ್ತವತೆಯು ಪ್ರಬಲವಾಗುತ್ತಿದೆ. ಸಮಗ್ರತೆಯನ್ನು ಸಮಾನತೆಯನ್ನು ಸಮರ್ಥಿಸುವ ಮಾನವತಾವಾದವನ್ನು ಅನುಸರಿಸುವಾಗ ಧಾರ್ಮಿಕ ರಂಗದಲ್ಲಿಯು ಹೊಸ ದೃಷ್ಟಿ ಹೊಸ ಸ್ವಾತಂತ್ರ್ಯ ಮೂಡಿ ಬರುತ್ತಿದೆ. ಮಾನವತಾವಾದಿಯ ಹೊಸ ದೃಷ್ಟಿಯಿಂದಾಗಿ ಧರ್ಮವು ದ್ವೈವತ್ವದ ಅದ್ಭುತ ಕಲ್ಪನೆಯ ಸೆರೆಯಿಂದ ಮುಕ್ತವಾಗಿ ವಾಸ್ತವ ಲೋಕದಲ್ಲಿ ಸಮಗ್ರತೆಯನ್ನು ಸಮಾನತೆಯನ್ನು ಸಾಧಿಸುವ ಕಾರ್ಯದಲ್ಲಿ ಫಲಪ್ರದವಾಗುತ್ತಿದೆ. ಬಸವಣ್ಣನ ಮಾನವತಾವಾದವು ಈ ಬಗೆಯದ್ದಾಗಿತ್ತು. ಆ ಕಾಲದಲ್ಲಿ ಬಂಧನಕ್ಕೊಳಗಾದಂತಿದ್ದ ಧರ್ಮವನ್ನು ಸ್ವತಂತ್ರಗೊಳಿಸಿದ, ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುತ್ತಾರೆಂದು ಹೇಳಿ ಧರ್ಮ ವ್ಯವಹಾರಗಳ ದ್ವಂದ್ವವನ್ನು ನೀಗಿದ. ಜನತೆಗೆ ಹೊಸ ದೃಷ್ಟಿಯನ್ನು, ಹೊಸ ಸ್ವಾತಂತ್ರ ತಂದುಕೊಟ್ಟ. ಮಾನವನ ಸಮಗ್ರತೆಯನ್ನು ಸಮಾನತೆಯನ್ನು ಅಂದು ರೂಢಿಸಿದ. ಈ ಹೊಸ ದೃಷ್ಟಿ ಹೊಸ ಸ್ವಾತಂತ್ರ್ಯಗಳು ಧಾರ್ಮಿಕರಂಗದಲ್ಲಿ, ಸಾಮಾಜಿಕ ವ್ಯವಸ್ಥೆಯಲ್ಲಿ ವ್ಯಕ್ತಿಗಳ ವಿಕಾಸದಲ್ಲಿ ಅಂದು ಕಂಡುದರ ಸ್ಪಷ್ಟವಾದ ರೇಖೆಗಳನ್ನು ಶಿವಶರಣರ ವಚನಗಳಲ್ಲಿ ಕಾಣಬಹುದಾಗಿದೆ. ವಚನಗಳ ವಿವರವಾದ ಅವಲೋಕನದಿಂದ ಅಲ್ಲಿ ಮೂಡಿಬಂದಿರುವ ಮಾವೀಯ ಮೌಲ್ಯಗಳ ಸಮರ್ಥನೆಯನ್ನು ನಾವು ಅರಿತುಕೊಳ್ಳಬಲ್ಲೆವು.

ಮಾನವನನ್ನು ಹೆಚ್ಚು ಸತ್ಯವಾದ ಬಗೆಯಲ್ಲಿ ಮಾನವನನ್ನಾಗಿ ಮಾಡುವ ಮಾನವತಾವಾದಿಯ ಗುರಿಯನ್ನು ಮಾನವನನ್ನು ದಿವ್ಯಜೀವನದ ಪಾಲುಗಾರರನ್ನಾಗಿ ಮಾಡುವ ಅನುಭಾವಿಯ ಗುರಿಯನ್ನು ಏಕ ಕಾಲಕ್ಕೆ ಸಾಧಿಸಿದ ಪುಣ್ಯಪುರುಷ ಬಸವಣ್ಣ. —

ಮಹಾತ್ಮರ ನೆನಪುಗಳು-೩ ಗೋವಿನ ಹಾಡು

ಸತ್ಯವಂತರ ಕತೆಗಳನ್ನು ಕೇಳಿದೊಡನೆಯೇ ಗಾಂಧೀಜಿ ರೋಮಾಂಚಿತರಾಗುತ್ತಿದ್ದರು. 1935 ರ ಸುಮಾರಿಗೆ ಸರ್ ಮಿರ್ಜಾ ಇಸ್ಮಾಯಿಲ್‌ರ ಆಮಂತ್ರಣದ ಮೇರೆಗೆ ಗಾಂಧೀಜಿ ನಂದೀಬೆಟ್ಟವನ್ನು ಸಂದರ್ಶಿಸಲು ಆಗಮಿಸಿದ್ದರು. ಆದರೆ ವೇಳೆಗನುಸಾರವಾಗಿ ಪ್ರಾರ್ಥನೆಯನ್ನು ತಪ್ಪಿಸುತ್ತಿರಲಿಲ್ಲ. ಒಮ್ಮೆ ಅವರು ಪ್ರಾರ್ಥನೆಯಲ್ಲಿ ಸ್ಥಳೀಯ ಹಾಡುಗಳನ್ನೇ ಹಾಡಬೇಕೆಂದು ಆಶಿಸಿದಾಗ ಕೆಲವು ಮಕ್ಕಳು "ಗೋವಿನ ಹಾಡನ್ನು" ಸುಶ್ರಾವ್ಯವಾಗಿ ಹಾಡಿದರು. ಪುಣ್ಯಕೋಟಿಯ ಸತ್ಯಸಂಧತೆ, ಕರುವಿನ ಮಾತೃಪ್ರೇಮ, ಪ್ರಾಮಾಣಿಕತೆಗಳನ್ನು ಅನಂತರ ಬಾಪೂಜಿಗೆ ವಿವರಿಸಿ ಹೇಳಲಾಯಿತು.

ಬಾಪೂಜಿ ಆನಂದ ಭಾಷ್ಪ ಸುರಿಸುತ್ತಾ, "ಈ ಹಾಡು ಸತ್ಯ, ಅಹಿಂಸೆಗಳ ನನ್ನ ತತ್ವದ ಪರಿಪೂರ್ಣ ನಿದರ್ಶನವಾಗಿದೆ. ಕನ್ನಡ ಭಾಷೆಯಲ್ಲಿ ಇಂಥ ಭಾವ ಪ್ರಚೋದಕ ಹಾಡು ಇರುವುದನ್ನು ನೋಡಿ ನನಗೆ ಪರಮಾಶ್ಚರ್ಯವೆನಿಸಿದೆ. ಇಂಥಾ ಮಹಾಗೀತೆಯು ಜಗತ್ತಿನ ಯಾವಭಾಗದಲ್ಲಿಯೂ ಯಾವ ಭಾಷೆಯಲ್ಲಿಯೂ ಇಲ್ಲವೆಂದು ನನ್ನ ಭಾವನೆ" ಎಂದು ನುಡಿದರು.

—ಪ. ರಾಮಕೃಷ್ಣ ಶಾಸ್ತ್ರಿ

(7 ನೇ ಪುಟದಿಂದ)

ವೈರಾಗ್ಯಗಳನ್ನು ಬೋಧಿಸಿ ಜನಮನವನ್ನು ತಣಿಸಿದ್ದಾರೆ. ಈ ವೀರಶೈವಯತಿ ಕವಿಗಳು ಜನಪ್ರಿಯರಾಗಿ ಜನಪದ ಕವಿಗಳೆಂಬ ಪ್ರಖ್ಯಾತಿಯನ್ನು ಪಡೆದಿರುತ್ತಾರೆ. ನೊಂದ ಮನುಸ್ಸಿಗೆ ಶಾಂತಿ ಸಮಾಧಾನಗಳನ್ನು ನೀಡಿ ಶಿವಕವಿಗಳು ಕೃತಾರ್ಥರಾಗಿದ್ದಾರೆ. ಸಮಾಜ ಜೀವನವೇ ಸಾಹಿತ್ಯ ಹೃದಯವೆಂಬ ಮಾತು ನಿತ್ಯ ಸತ್ಯ. ಅಂದಿನ ಸಮಾಜದಲ್ಲಿ ಉದಾತ್ತ ಭಾವನೆಯಾಗಲಿ, ಉತ್ಕಟ ಆಶೆ ಆಕಾಂಕ್ಷೆಗಳಾಗಲ್ಲಿ ಉದಾರಚಿತ್ತ ವೃತ್ತಿಯಾಗಲಿ ಪ್ರಮುಖವಾಗಿರಲಿಲ್ಲ. 'ರಾಜಾ ರಾಷ್ಟ್ರಸ್ಯ ಕಾರಣಂ, ಎಂಬಂತೆ ರಾಜರಲ್ಲಿಯೂ ಸಂತೃಪ್ತಿ ಮನೋಭಾವವಾಗಲಿ, ಸರ್ವ ಸಮತಾ ಭಾವನೆಯಾಲಿ ಪಾರಮಾರ್ಥಿಕ ಚಿಂತನೆಯಾಗಲಿ ಬೆಳೆಯಲು ಅವಕಾಶವಿರಲಿಲ್ಲ. ಸಮರ್ಥನಾದ ಪ್ರಭು; ಸಂತುಷ್ಟವಾದ ಸಮಾಜ ಈ ಎರಡೂ ಇಲ್ಲದಿದ್ದರೆ ಯಾವ ಕಾಲದಲ್ಲಿಯೇ ಆಗಲಿ ಸಾಹಿತ್ಯ ಸರ್ವಾಂಗ ಸುಂದರವಾಗಿ ಬೆಳೆಯಲಾರದು. ಈ ಸೂತ್ರ ಕನ್ನಡನಾಡಿನಲ್ಲಿ ಹದಿನೆಂಟನೆಯ ಶತಮಾನದಲ್ಲಿ ವ್ಯಾಪಕವಾಗಿಯೇ ಇತ್ತೆಂದು ಚರಿತ್ರೆ ಸ್ಪಷ್ಟಪಡಿಸುತ್ತದೆ.

ಹದಿನೆಂಟನೆಯ ಶತಮಾನದ ಪ್ರಾರಂಭದಲ್ಲಿ ಮೈಸೂರು ಸಂಸ್ಥಾನವನ್ನು ಕಂಠೀರವ ಮಹಾರಾಜ ಒಡೆಯನು [1704–1714] ಆಳುತ್ತಿದ್ದನು. ಈತನು ಚಿಕ್ಕದೇವರಾಯನ ತರುವಾಯ ಪಟ್ಟಕ್ಕೆ ಬಂದನು. ಚಿಕ್ಕದೇವರಾಜ ಒಡೆಯನ ಕಾಲದಲ್ಲಿ ಕನ್ನಡ ಸಾಹಿತ್ಯ ವಿಪುಲವಾಗಿ ಬೆಳೆಯಿತು. ಅದುವರೆಗೆ ವೀರಶೈವ ಧರ್ಮಾವಲಂಬಿಗಳಾಗಿದ್ದ ಮೈಸೂರು ರಾಜ ಮನೆತನದವರು ಶ್ರೀ ವೈಷ್ಣವ ಧರ್ಮವನ್ನು ಅವಲಂಬಿಸಿದರು.

ಚಿಕ್ಕದೇವರಾಜ ಒಡೆಯ ಕ್ರಿ. ಶ 1673 ರಿಂದ 1704 ರ ವರೆಗೆ ಮೂವತ್ತೊಂದು ವರ್ಷ ರಾಜ್ಯವಾಳಿದನು. ನಂಜನಗೂಡಿನ ದುರ್ಘಟನೆ ನಡೆದು ಸುಮಾರು ಇಪ್ಪತ್ತು ವರ್ಷಗಳಾದ ಮೇಲೆ ಈ ದೊರೆ ಕಾಲವಾದನು. ಆದ್ದರಿಂದ ವೀರಶೈವ ಸಾಹಿತ್ಯಸೃಷ್ಟಿ ಹದಿನೆಂಟನೆಯ ಶತಮಾನದಲ್ಲಿ ಇಂಥ ರಾಜಕೀಯ ದುರಂತ ಛಾಯೆಯಲ್ಲಿ ಪ್ರಾರಂಭವಾಯಿತು. ವೀರಶೈವ ಕವಿಗಳಿಗೆ ರಾಜಾಶ್ರಯ ದುರ್ಲಭವಾದಂತೆಯೇ ವೀರಶೈವ ಧಾರ್ಮಿಕ ಪರಿಪೋಷಣೆಯೂ ಕುಂಟಿತವಾಯಿತು. *

(15 ನೇ ಪುಟದಿಂದ)

ನಿರ್ಮಿಸಿತು. ನಾನಾ ಸಂಶೋಧಕ ಸಂಸ್ಥೆ ವಿಶ್ವವಿದ್ಯಾನಿಲಯದ ಪ್ರಾಣಿಗಳು, ರಸಾಯನಿಕ ವಸ್ತುಗಳು ಮುಂತಾದುವುಗಳನ್ನು ಶುದ್ಧೀಕರಿಸಲು ಟ್ರೊಂಬೆಯ ಆಟಾಮಿಕ್ ಎನರ್ಜಿ ಅಧಿಕಾರಿಗಳು ರೇಡಿಯೋ ಕಿರಣಗಳನ್ನು ಪ್ರಸಾರಿಸಿ 43 ವೈಜ್ಞಾನಿಕ ಸಂಸ್ಥೆಗಳಿಗೆ ಸಹಾಯ ಮಾಡಿದರು.

ಬೊಂಬಾಯಿ ಬಳಿ ಇರುವ ಕಾರಾಪುರ, ತಮಿಳುನಾಡಿನ ಕಲ್ಪಕ್ಕಂಗಳಲ್ಲಿ ಅಣುಶಕ್ತಿ-ಪವರ್ ಹೌಸ್‌ಗಳು ನಿರ್ಮಿತವಾಗಿವೆ. ಬಾಹ್ಯಾಕಾಶದಶೊಧನೆಗೆ ಥುಂಬಾ ಎಂಬ ಊರಿನಲ್ಲಿ "ರಾಕೆಟ್ ಲಾರ್ಚಿಂಗ್" ಕ್ಷೇತ್ರವಾಗಿದೆ. ಉಪಗ್ರಹಗಳಿಂದ ಸಮಾಚಾರ ಕಳಿಸುವ ವಿಜ್ಞಾನ ಶೋಧನೆ ಶಿಕ್ಷಣಕ್ಕೆ ಅಹಮ್ಮದಾಬಾದ್‌ನಲ್ಲಿ ಅಣುಶಕ್ತಿ ಪ್ರಯೋಗ ಸಂಸ್ಥೆ ಸ್ಥಾಪಿತವಾಗಿದೆ. ❋

ಅನಾದಿ ಪರಶಿವ ತತ್ವದಿಂದ ಚಿತ್ತು ಉದಯವಾಯಿತು.
ಆ ನಿರ್ಮಲ ಮಹಾಜ್ಞಾನ ಚಿತ್ ಸ್ವರೂಪವೇ ಬಸವಣ್ಣ ನೋಡಾ.

—ತೋಂಟದ ಸಿದ್ಧಲಿಂಗ ಯತಿಗಳು


ನಮ್ಮ ಗುಹೇಶ್ವರನ ಶರಣ ಸಂಗನ ಬಸವಣ್ಣನ ದಾಸೋಹದ
ಘನವ ಏನೆಂದೆನಬಹುದು ನೋಡಾ ಸಿದ್ಧರಾಮಯ್ಯ.

—ಅಲ್ಲಮ

"SIDDAGANGA" Monthly, Sree Siddaganga Mutt. KRN Q-9
Registered with the Registrar of News papers for India under No. 17139 69

ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿ ಮುದ್ರಣಾಲಯ, ಶ್ರೀ ಸಿದ್ಧಗಂಗಾ ಮಠ.

ಸಿದ್ಧಗಂಗಾ



"ಪರಮ ಪೂಜ್ಯ ಶ್ರೀ ಶ್ರೀ ಗಳವರು ಇತ್ತೀಚೆಗೆ ತುಮಕೂರಿನಲ್ಲಿ ರಾಜ್ಯ ಯುವಜನ ವಿದ್ಯಾರ್ಥಿ ನಿಲಯಗಳ ಸಮ್ಮೇಳನದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಮುಖ್ಯಮಂತ್ರಿ ದೇವರಾಜ ಅರಸು ಅವರು ಸಮ್ಮೇಳನವನ್ನು ಉದ್ಘಾಟಿಸಿದರು..........."

ಜೂನ್, ೧೯೭೮

'ಸಿದ್ಧಗಂಗಾ' ಚಿರಾಯುವಾಗಲೆಂದು

ಹರಸಿ ಹಾರೈಸಿರುವ ಆಜೀವ ಸದಸ್ಯರ ಬಳಗ

436 ಶ್ರೀ ಬಿ. ಎಲ್. ಮಹದೇವಪ್ಪ
ಕೆ. ಆರ್. ನಗರ
ಮೈಸೂರು ಜಿಲ್ಲೆ.

437 ಶ್ರೀ ಪಿ. ಕೆ. ವೀರಭದ್ರಪ್ಪ
ವೀರಭದ್ರೇಶ್ವರ ಏಜನ್ಸೀಸ್,
ಪಿರಿಯಾಪಟ್ಟಣ ಮೈಸೂರು ಜಿಲ್ಲೆ.

438 ಶ್ರೀ ಎನ್. ರಾಜಗೋಪಾಲಾಚಾರ್
S/o ನಂಜುಂಡಾಚಾರ್
ಬೂದಿಗೆರೆ, ದೇವನಹಳ್ಳಿ ತಾ||
ಬೆಂಗಳೂರು ಜಿಲ್ಲೆ.

439 ಶ್ರೀ ಹೆಚ್. ಗವಿರಂಗಪ್ಪ,
ಸರ್ವೋದಯ ಸೇವಕ
ಅರಸೀಕೆರೆ, ತುಮಕೂರು ಜಿಲ್ಲೆ.

440 ಶ್ರೀ ಸಿ. ಬಸವರಾಜಯ್ಯ ಬಿ. ಇ.
ಅಸಿಸ್ಟೆಂಟ್ ಇಂಜಿನಿಯರ್
ಅರ್ಕಾವತಿ ರಿವರ್ ಪ್ರಾಜೆಕ್ಟ್
ಕನಕಪುರ, ಬೆಂಗಳೂರು ಜಿಲ್ಲೆ.

441 ಶ್ರೀ ಜಯರಾಂ
ಶ್ರೀನಿವಾಸ ಇಂಡಸ್ಟ್ರೀಸ್
ತಿಪಟೂರು, ತುಮಕೂರು ಜಿಲ್ಲೆ.

442 ಶ್ರೀ ಕೆ. ಬಿ. ವೀರಣ್ಣ, ಮ್ಯಾನೇಜರ್
ಎನ್. ಇ. ಎಸ್. ಆಫೀಸ್,
ತುರುವೇಕೆರೆ ತುಮಕೂರು ಜಿಲ್ಲೆ.

443 ಶ್ರೀ ಬಿ. ಸಿ. ಅಪ್ಪಸ್ವಾಮಿ, ಪ್ಲಾಂಟರ್
ಬಾಳ್ಳುಪೇಟೆ, ಹಾಸನ ಜಿಲ್ಲೆ.

444 ಶ್ರೀ ಬಿ. ರಾಜಶೇಖರಮೂರ್ತಿ
ಮದಿಗುಂಡಮ್, ಕೊಳ್ಳೇಗಾಲ ತಾ||
ಮೈಸೂರು ಜಿಲ್ಲೆ.

445 ಶ್ರೀ ಎಂ. ನಾಗರಾಜ, ಎಂ. ಎ
S/o ಮಾದೇಗೌಡ ಸಿಂಗನಾಲೂರು,
ಕೊಳ್ಳೆಗಾಲ ತಾ|| ಮೈಸೂರು ಜಿಲ್ಲೆ.

446 ಶ್ರೀ ಎಲ್. ನಂಜುಂಡಪ್ಪ ಡಿ. ಎಂ. ಇ.
S/o ಶ್ರೀ ಲಿಂಗಪ್ಪ, ವಡ್ಡರಹಳ್ಳಿ
ದೊಡ್ಡಬಳ್ಳಾಪುರ ತಾ|| ಬೆಂಗಳೂರು ಜಿಲ್ಲೆ.

447 ಶ್ರೀ ಜಿ. ವೇಮಣ್ಣ, ಡಿ. ಎಂ. ಇ.
S/o ಶ್ರೀ ಜಿ ಹನುಮಂತಪ್ಪ
ಹಲ್ಕುಂಡಿ, ಬಳ್ಳಾರಿ ಜಿಲ್ಲೆ.

448 ಶ್ರೀ ಆರ್. ಪ್ರಭು,
ಅಸಿಸ್ಟೆಂಟ್ ಇಂಜಿನಿಯರ್
ಬಿ. ಇ. ಎಂ. ಎಲ್. ನಗರ, ಕೆ. ಜಿ. ಎಫ್

449 ಶ್ರೀ ಎನ್. ಮುದ್ದಣ್ಣ
ರಾಜಾಜಿ ನಗರ, ಬೆಂಗಳೂರು-10

(ಮುಂದುವರಿಯುತ್ತದೆ)